# ಶಿಕ್ಷಕರ ಶಿಕ್ಷಣ ಮತ್ತು ನಿರ್ವಹಣೆ: ನೀತಿ, ಆಚರಣೆ ಮತ್ತು ಪರ್ಯಾಯಗಳು

ಬಿ ಎಸ್ ರಿಷಿಕೇಶ್



ಶಿಕ್ಷಣ ಕ್ಷೇತ್ರವು ಚರ್ಚೆಗಳಿಂದ ತುಂಬಿದೆ, ಸೀಮಿತ ಆಲೋಚನೆಗಳು ಮತ್ತು ಸಂಕುಚಿತ ಗುರಿಗಳ ಆಧಾರದ ಮೇಲೆ ನಿಲುವುಗಳನ್ನು ತೆಗೆದುಕೊಂಡು, ತಮ್ಮ ವಾದಕ್ಕಿಂತ ಭಿನ್ನವಾದ ವಿಚಾರಗಳು ಪರಿಣಾಮಕಾರಿ ಎಂಬುದಕ್ಕೆ ಬಲವಾದ ಪುರಾವೆಗಳಿದ್ದರೂ ತಮ್ಮದೇ ನಿಲುವುಗಳಿಗೆ ಅಂಟಿಕೊಳ್ಳುವುದರಿಂದ ಇವು ಸಾಮಾನ್ಯವಾಗಿ ಇತ್ಯರ್ಥವಾಗುವುದಿಲ್ಲ. ಇಷ್ಟಾದರೂ, ಶಿಕ್ಷಣವನ್ನು ಸುಧಾರಿಸುವಲ್ಲಿ 'ಶಿಕ್ಷಕರ ಗುಣಮಟ್ಟ'ವು ಪ್ರಮುಖ ಅಂಶವೆಂದು ಈ ಚರ್ಚೆಯಲ್ಲಿಯ ಬಹುತೇಕ ಭಾಗೀದಾರರು ಒಪ್ಪುತ್ತಾರೆ.

**ಕೋಷ್ಟಕ 1: ಭಾರತದಲ್ಲಿ ಶಾಲೆಗಳು, ದಾಖಲಾತಿ ಮತ್ತು ಶಿಕ್ಷಕರು**

| ಶಾಲಾ ಪ್ರಕಾರ | ಶಾಲೆಗಳು | ದಾಖಲಾತಿ | ಶಿಕ್ಷಕರು |
|---|---|---|---|
| ಸರ್ಕಾರಿ (ಅನುದಾನಿತವೂ ಸೇರಿದಂತೆ) | 1196658 | 174765189 | 5808273 |
| ಎಲ್ಲಾ ಆಡಳಿತ ಮಂಡಳಿ (ಸರ್ಕಾರಿ + ಖಾಸಗಿ) | 1522346 | 260596960 | 8691922 |

(ಮೂಲ: ಯು–ಡಿಐಎಸ್ಇ 2014–15)

## ಹಿನ್ನೆಲೆಯನ್ನು ಅರ್ಥೈಸಿಕೊಳ್ಳುವುದು

1 ರಿಂದ 12ನೇ ತರಗತಿಗಳಲ್ಲಿ 260 ದಶಲಕ್ಷಕ್ಕೂ ಹೆಚ್ಚು ಮಕ್ಕಳ ಜೀವನದ ಮೇಲೆ ಪರಿಣಾಮ ಬೀರುವ ಸುಮಾರು 1.5 ದಶಲಕ್ಷ ಶಾಲೆಗಳಲ್ಲಿ ಪ್ರಸ್ತುತ 8.5 ದಶಲಕ್ಷ ಶಿಕ್ಷಕರು ಶಿಕ್ಷಣದ ಕಾರ್ಯದಲ್ಲಿ ನಿರತರಾಗಿದ್ದಾರೆ. ಈ ಪೈಕಿ 5 ದಶಲಕ್ಷಕ್ಕೂ ಹೆಚ್ಚಿನವರು ಪ್ರಾಥಮಿಕ ಶಾಲೆಗಳಲ್ಲಿದ್ದಾರೆ.

ಇದು ಯಾವುದೇ ಕೋನದಿಂದ ನೋಡಿದರೂ ದಿಗ್ಭ್ರಮೆಗೊಳಿಸುವ ಸಂಖ್ಯೆಯಾಗಿದೆ. ಈ ಶಿಕ್ಷಕರು ದೇಶದಲ್ಲಿ ಅಸ್ತಿತ್ವದಲ್ಲಿರುವ 18,000ಕ್ಕೂ ಹೆಚ್ಚು ಶಿಕ್ಷಕ ಶಿಕ್ಷಣ ಸಂಸ್ಥೆಗಳಿಂದ (ಟಿಇಐ) ವೃತ್ತಿಪರ ಪ್ರಮಾಣಪತ್ರ ಅಥವಾ ಪದವಿಯನ್ನು ಪಡೆದಿದ್ದಾರೆ. ಈ ಅಂಕಿ–ಅಂಶಗಳು ಸ್ವಾತಂತ್ರ್ಯಾನಂತರ ನಾವೆಷ್ಟು ದೂರ ಬಂದಿದ್ದೇವೆ ಎಂಬುದನ್ನು ತೋರಿಸುತ್ತವೆ, ಹಿಂದೆ ಕೇವಲ 350 ಶಿಕ್ಷಕ ಶಿಕ್ಷಣ ಸಂಸ್ಥೆ(ಟಿಇಐ)ಗಳಷ್ಟೇ ಇದ್ದವು.

ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿಯು (ಎನ್‌ಸಿಟಿಇ) ದೇಶದ ಶಿಕ್ಷಕ ಶಿಕ್ಷಣ ಸಂಸ್ಥೆಗಳನ್ನು (ಟಿಇಐ) ನಿರ್ವಹಿಸುವ ಉನ್ನತ ಸಂಸ್ಥೆಯಾಗಿದೆ. 'ದೇಶಾದ್ಯಂತ ಶಿಕ್ಷಕರ ಶಿಕ್ಷಣ ವ್ಯವಸ್ಥೆಯ ಯೋಜಿತ ಮತ್ತು ಸಂಘಟಿತ ಅಭಿವೃದ್ಧಿಯನ್ನು ಸಾಧಿಸುವುದು'[1] ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ(ಎನ್‌ಸಿಟಿಇ)ಯ ಪ್ರಮುಖ ಪಾತ್ರವಾಗಿದೆ. ಇದು ಶಿಕ್ಷಕ ಶಿಕ್ಷಣ (ಟಿಇ) ವ್ಯವಸ್ಥೆಯನ್ನು ನಿಯಂತ್ರಿಸುವುದು, ಮೇಲ್ವಿಚಾರಣೆ ಮಾಡುವುದು, ಶಿಕ್ಷಕರ ಶಿಕ್ಷಣ ವ್ಯವಸ್ಥೆಯ ಅಡಿಯಲ್ಲಿ ಶಿಕ್ಷಕರಾಗಲು ಕನಿಷ್ಠ ಅರ್ಹತೆಯನ್ನು ಸೂಚಿಸುವುದರಿಂದ ಹಿಡಿದು ಕೋರ್ಸ್‌ಗಳನ್ನು ನಡೆಸಲು ಅನುಮತಿ ನೀಡುವವರೆಗಿನ ಬಹುತೇಕ ಎಲ್ಲ ಆದೇಶಗಳನ್ನು ಒಳಗೊಳ್ಳುತ್ತದೆ.

ಈ ಲೇಖನವು ಶಿಕ್ಷಕ ಶಿಕ್ಷಣ ಸಂಸ್ಥೆಗಳ (ಟಿಇಐ) ಸ್ಥಿತಿ, ಶಿಕ್ಷಕರ ಅಭಿವೃದ್ಧಿ ಸಂಬಂಧಿತ ಅಂಶಗಳು, ಶಿಕ್ಷಕ ನಿರ್ವಹಣೆಯ ಇತರ ಅಂಶಗಳನ್ನೂ, ಶಿಕ್ಷಕರನ್ನು ನಿಯಂತ್ರಿಸುವ ನೀತಿಗಳನ್ನೂ ಒಳಗೊಂಡಂತೆ ಶಿಕ್ಷಕ ಶಿಕ್ಷಣ ಕ್ಷೇತ್ರವು ಪ್ರಸ್ತುತ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳನ್ನು ಸೆರೆಹಿಡಿಯಲು ಪ್ರಯತ್ನಿಸುತ್ತದೆ.


## ಶಿಕ್ಷಕ ಶಿಕ್ಷಣ ಸಂಸ್ಥೆಗಳು (ಟಿಇಐ)

ಶಿಕ್ಷಕ ಶಿಕ್ಷಣ ಸಂಸ್ಥೆಗಳ (ಟಿಇಐ) ಸಂಖ್ಯೆಯು 18,000ಕ್ಕಿಂತಲೂ ಹೆಚ್ಚಿನದಾಗಿದೆ! ಕೋಷ್ಟಕ 1ರ (ಮೇಲಿನ) ಅಂಕಿ–ಅಂಶಗಳು ಒಟ್ಟು ಶೇ. 80ರಷ್ಟು ಸರ್ಕಾರಿ ಶಾಲೆಗಳು ಮತ್ತು ಶೇ. 65% ವಿದ್ಯಾರ್ಥಿಗಳು ಹಾಗೂ ಶೇ. 65% ಶಿಕ್ಷಕರು ಈ ವ್ಯವಸ್ಥೆಯಲ್ಲಿದ್ದಾರೆ ಎಂಬುದನ್ನು ಸೂಚಿಸುತ್ತವೆ. ಆದಾಗ್ಯೂ, ನಾವು ಶಿಕ್ಷಕ ಶಿಕ್ಷಣ ಸಂಸ್ಥೆಗಳ (ಟಿಇಐ) ಸಂಖ್ಯೆಯನ್ನು

1. NCTE at a Glance; Objectives http://ncte-india.org/ncte_new/?page_id=782

[1]NCTE at a Glance; Objectives http://ncte-india.org/ncte_new/?page_id=782

## TEACHER EDUCATION INSTITUTIONS




ವಿಶ್ಲೇಷಿಸಿದಾಗ, ಆ ಜಾಗವನ್ನು ಖಾಸಗಿಯವರೇ ಹೆಚ್ಚು ಆಕ್ರಮಿಸಿಕೊಂಡಿದ್ದಾರೆ; ದೇಶಾದ್ಯಂತ ಶೇ. 90ಕ್ಕಿಂತ ಹೆಚ್ಚು ಟಿಇಐಗಳನ್ನು ಖಾಸಗಿಯಾಗಿ ನಿರ್ವಹಿಸಲಾಗುತ್ತಿದೆ. ಇದೇನನ್ನು ಸೂಚಿಸುತ್ತದೆ ಎಂದರೆ– ಖಾಸಗಿಯವರು ಅವಕಾಶವನ್ನು ಕಸಿದುಕೊಂಡಿದ್ದಾರೆ ಮತ್ತು ಸರ್ಕಾರಕ್ಕೆ ಶಾಲಾ ಶಿಕ್ಷಣದ ಬೇಡಿಕೆಯ ವೇಗಕ್ಕೆ ತಕ್ಕಂತೆ ಸ್ಪಂದಿಸಲು ಸಾಧ್ಯವಾಗುತ್ತಿಲ್ಲ. ಸರ್ಕಾರ ಶಾಲೆಗಳನ್ನೇನೋ ಒದಗಿಸಿತು ಆದರೆ, ಸಮರ್ಪಕವಾಗಿ ಶಿಕ್ಷಕರನ್ನು ಒದಗಿಸುವ ಜವಾಬ್ದಾರಿಯನ್ನು ಖಾಸಗಿಯವರಿಗೆ ವಹಿಸಿತು. ದೇಶದ ಎಲ್ಲ ಪ್ರದೇಶಗಳ ಪರಿಸ್ಥಿತಿಯೂ ಇದೇ ಆಗಿದೆ. ಆದರೆ ರಾಜ್ಯದ ಇತರ ಪ್ರದೇಶಗಳಲ್ಲೂ ಅಸಮರ್ಪಕ ಹಂಚಿಕೆಯಂತಹ ಸಮಸ್ಯೆಯನ್ನು ಗಮನಿಸಬೇಕು. ದೇಶಾದ್ಯಂತ ಕೆಲವು ಉತ್ತಮ ಶಿಕ್ಷಕ ಶಿಕ್ಷಣ ಸಂಸ್ಥೆಗಳಿವೆ (ಟಿಇಐ), ಅವುಗಳು ಖಾಸಗಿ ಸಂಸ್ಥೆಗಳಾಗಿದ್ದರೂ ವ್ಯಾಪಾರೀ ದೃಷ್ಟಿಯಿಂದ ಕಾರ್ಯ ನಿರ್ವಹಿಸುವುದಿಲ್ಲ. ಆದರೆ ಅವುಗಳ ಸಂಖ್ಯೆ ಬೆರಳೆಣಿಕೆಯಷ್ಟಿದ್ದು ಮತ್ತು ತೀರ ದೂರದಲ್ಲಿವೆ; ಹೆಚ್ಚಿನವು 'ಶಿಕ್ಷಣ ಮಾರುಕಟ್ಟೆ'ಗಳಾಗಿವೆ ಅಥವಾ ಒಂದು 'ಬೆಲೆಗೆ' ಪದವಿಗಳನ್ನು ಮಾರುವ ಏಜೆನ್ಸಿಗಳಾಗಿವೆ ಎನ್ನಬಹುದು. ಒಂದಂತೂ ಸ್ಪಷ್ಟ, ಶಿಕ್ಷಣ ಸಂಸ್ಥೆಗಳ ಸಂಖ್ಯೆಗೆ ತಕ್ಕಂತೆ ಅವುಗಳ ಗುಣಮಟ್ಟ ಇಲ್ಲ.

ಮತ್ತೊಂದೆಡೆ, ಸರ್ಕಾರಿ ಜಾಗದಲ್ಲಿ 571 ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು (ಡಿಐಇಟಿ), 106 ಶಿಕ್ಷಕ ಶಿಕ್ಷಣ ಕಾಲೇಜುಗಳು (ಸಿಟಿಇ), 32 ಉನ್ನತ ಅಧ್ಯಯನ ಶಿಕ್ಷಣ ಸಂಸ್ಥೆಗಳು (ಐಎಎಸ್‌ಇ) ಮತ್ತು ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ 1986) ನಂತರ 8ನೇ ಯೋಜನೆ ಅವಧಿಯಲ್ಲಿ ಹುಟ್ಟಿದ ದೇಶದ 33 ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಗಳು (ಎಸ್‌ಸಿಇಆರ್‌ಟಿ) / ರಾಜ್ಯ ಶಿಕ್ಷಣ ಸಂಸ್ಥೆಗಳು (ಎಸ್‌ಐಇ). ಶಿಕ್ಷಕರ ಶಿಕ್ಷಣ ಸಂಸ್ಥೆಗಳ (ಟಿಇಐ) ಜಾಗಗಳಲ್ಲಿ ಕೆಲವು ರಚನಾತ್ಮಕ ಕಾರ್ಯಗಳು ನಡೆದಿವೆ. ಆದಾಗ್ಯೂ, ಈ ಸಂಸ್ಥೆಗಳಲ್ಲಿ ಕೊಡುಗೆಯ ಗುಣಮಟ್ಟದಲ್ಲಿ ಸಮಾನತೆ ಇಲ್ಲ. ಭಾರತ ಸರ್ಕಾರದ ಕೇಂದ್ರೀಯ ಪ್ರಾಯೋಜಿತ ಯೋಜನೆಯಡಿ ಅವುಗಳನ್ನು ಸ್ಥಾಪಿಸಲಾಗಿದ್ದರೂ, ಈ ಸಂಸ್ಥೆಗಳಲ್ಲಿ ಹೆಚ್ಚಿನವು ಕಳಪೆ ಮೂಲಸೌಕರ್ಯಗಳು, ಹೆಚ್ಚಿನ ಸಂಖ್ಯೆಯ ಖಾಲಿ ಹುದ್ದೆಗಳು, ಉತ್ತಮ ಗುಣಮಟ್ಟದ ಶೈಕ್ಷಣಿಕ ಉತ್ಪಾದನೆಯ ಕೊರತೆ... ಇತ್ಯಾದಿಗಳಿಂದ ಪೀಡಿತವಾಗಿವೆ. ಇದು ಯಾವುದೇ ರೀತಿಯ ಪ್ರಗತಿಯನ್ನು ಸಾಧ್ಯವಾಗಿಸುವುದಿಲ್ಲ (ಅಜೀಂ ಪ್ರೇಮ್‌ಜಿ ಫೌಂಡೇಶನ್, 2010).

**ಪ್ರಾಥಮಿಕ ಹಂತದಲ್ಲಿ ಏಕೋಪಾಧ್ಯಾಯ ಶಾಲೆಗಳ ಶೇಕಡಾವಾರು ರಾಜ್ಯಗಳಲ್ಲಿ ದೊಡ್ಡ ವ್ಯತ್ಯಾಸಗಳಿವೆ:. ಗೋವಾ (39.5%), ಅರುಣಾಚಲ ಪ್ರದೇಶ (48.8%), ರಾಜಸ್ಥಾನ (25%), ಆಂಧ್ರಪ್ರದೇಶ (24%), ಕರ್ನಾಟಕ (14.9%), ಹಿಮಾಚಲ ಪ್ರದೇಶ (11.2%), ಬಿಹಾರ (12.3%) ಮತ್ತು ಒಡಿಶಾ (9.2%).**

ಮೂಲ: DISE 2013–14

ದೇಶಾದ್ಯಂತ ಹರಡಿರುವ ಶಿಕ್ಷಕ ಶಿಕ್ಷಣ ಸಂಸ್ಥೆಗಳ (ಟಿಇಐ) ಸ್ಥಿತಿಗತಿಗಳನ್ನು ಎತ್ತಿ ತೋರಿಸುವ ಅನೇಕ ವರದಿಗಳು, ಅಧ್ಯಯನಗಳು ನಮ್ಮ ಮುಂದಿವೆ. ಈ ಅಧ್ಯಯನಗಳಲ್ಲಿ ಪ್ರಮುಖವಾದುದು ನ್ಯಾಯಮೂರ್ತಿ ವರ್ಮಾ ಆಯೋಗ (ಜೆವಿಸಿ) ವರದಿ.[2] 2012ರಲ್ಲಿ ಭಾರತದ ಸುಪ್ರೀಂ ಕೋರ್ಟ್ ನೇಮಕ ಮಾಡಿದ ನ್ಯಾಯಮೂರ್ತಿ ವರ್ಮಾ ಆಯೋಗ (ಜೆವಿಸಿ) ವರದಿಯು ಶಿಕ್ಷಕ ಶಿಕ್ಷಣದ (ಟಿಇ) ಅಸ್ವಸ್ಥತೆಯನ್ನು, ಶಿಕ್ಷಕ ಶಿಕ್ಷಣ ಸಂಸ್ಥೆಗಳು (ಟಿಇಐ) ಎಷ್ಟು ಪ್ರಪಾತಕ್ಕಿಳಿದಿವೆ ಎಂಬುದನ್ನು ಎತ್ತಿ ತೋರಿಸುತ್ತದೆ. ಇದು ಮಹಾರಾಷ್ಟ್ರದಲ್ಲಿ ಶಿಕ್ಷಕ ಶಿಕ್ಷಣ (ಟಿಇ) ನಿಯಂತ್ರಿಸುವಲ್ಲಿ ರಾಷ್ಟ್ರೀಯ ಶಿಕ್ಷಕ ಶಿಕ್ಷಣ ಸಂಸ್ಥೆಯು (ಎನ್‌ಸಿಟಿಇ) ವಿಫಲವಾಗಿದೆ ಎಂಬುದರ ಘೋರ ಚಿತ್ರಣ ಮಾತ್ರವಲ್ಲ, ಜೊತೆಗೆ ದೇಶಾದ್ಯಂತ ಶಿಕ್ಷಕ ಶಿಕ್ಷಣದ (ಟಿಇ) ಹೆಸರಿನಲ್ಲಿ ಅಸ್ತಿತ್ವದಲ್ಲಿರುವ ಸ್ಥಿತಿಗೆ ಕನ್ನಡಿಯಾಗಿದೆ.

**ಶಿಕ್ಷಕ ಶಿಕ್ಷಣ ಸಂಸ್ಥೆಗಳ (ಟಿಇಐ) ಗುಣಮಟ್ಟದ ಸುಧಾರಣೆಗೆ ಕ್ರಮಗಳೆಂದರೆ:**

- ಅಸ್ತಿತ್ವದಲ್ಲಿರುವ ಎಲ್ಲಾ ಖಾಸಗಿ ಶಿಕ್ಷಕ ಶಿಕ್ಷಣ ಸಂಸ್ಥೆಗಳನ್ನು ಪರಿಶೀಲಿಸುವುದು; ನಿಯಮಗಳಿಗೆ ಮತ್ತು ಶಿಕ್ಷಕ ಶಿಕ್ಷಣ ಸಂಸ್ಥೆಯ ಧ್ಯೇಯೋದ್ದೇಶಗಳಿಗೆ ಬದ್ಧರಾಗಿರದೇ ಇರುವವರನ್ನು ನಿಷೇಧಿಸುವುದು— ಬೇರೆ ರೀತಿಯಲ್ಲಿ ಹೇಳುವುದಾದರೆ, ಶಿಕ್ಷಕ ಪದವಿಗಳನ್ನು ಉತ್ಪಾದಿಸುವ ಅಂಗಡಿಗಳಾಗಿ ಮಾರ್ಪಟ್ಟಿರುವ ಸಂಸ್ಥೆಗಳನ್ನು ಮುಚ್ಚಬೇಕು; ಎಲ್ಲಾ ಸರ್ಕಾರಿ ಶಿಕ್ಷಕ ಶಿಕ್ಷಣ ಸಂಸ್ಥೆಗಳನ್ನು ಬಲಪಡಿಸುವುದು; ಅಗತ್ಯವಿರುವಲ್ಲಿ ಅವುಗಳನ್ನು ಉನ್ನತೀಕರಿಸುವುದು; ಇದರಿಂದಾಗಿ ಶಿಕ್ಷಕ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡಬಯಸುವವರಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸಲು ಸಾಧ್ಯವಾಗುತ್ತದೆ.

2. JVC Report mhrd.gov.in/sites/upload_files/mhrd/files/document-reports/JVC%20Vol%201.pdf

## ವೃತ್ತಿಪರ ಅಭಿವೃದ್ಧಿಗೆ ವಿಭಿನ್ನ ರೀತಿಯ ಉದಾಹರಣೆಗಳು

- ಆರಂಭಿಕ ಅವಧಿಯ ತರಬೇತಿ– ಅನುಭವಿ ಶಿಕ್ಷಕರು, ಪ್ರಾಂಶುಪಾಲರು ಅಥವಾ ತಜ್ಞರನ್ನು ಹೊಸ ಶಿಕ್ಷಕರ ತರಗತಿಗಳನ್ನು ಅವಲೋಕಿಸಲು ತರಬೇತುದಾರರಾಗಿ ಗುರುತಿಸಬಹುದು.
- ಸಹವರ್ತಿ ಕಲಿಕೆ– ಶಾಲಾ ಮುಖ್ಯಸ್ಥರು ಶಿಕ್ಷಕರ ಯೋಜನೆಗಳಿಗೆ ವೇಳಾಪಟ್ಟಿಗಳನ್ನು ರೂಪಿಸಲು ನೆರವಾಗುವುದು ಹಾಗೂ ಪರಸ್ಪರರ ತರಗತಿಗಳನ್ನು ಗಮನಿಸುವುದು; ಯೋಜನೆಗಳಿಗೆ ಪ್ರತಿಕ್ರಿಯೆ ನೀಡುವುದರ ಮೂಲಕ ಸಹಾಯ ಮಾಡಬೇಕಾಗುತ್ತದೆ.
- ಶಾಲೆಯ ಹೊರಗೆ ಕಲಿಕಾ ಸಮುದಾಯಗಳು– ಸ್ವಯಂಪ್ರೇರಿತ ವೃತ್ತಿಪರ ಶಿಕ್ಷಕ ಜಾಲಗಳು (ಉದಾ.: ರಾಜಸ್ಥಾನ, ಉತ್ತರಾಖಂಡ ಮತ್ತು ಕರ್ನಾಟಕ) ಮತ್ತು ಐಸಿಟಿಯಿಂದ ಶಕ್ತವಾದ ಆನ್‌ಲೈನ್ ವಿಷಯ ಶಿಕ್ಷಕ ಗುಂಪುಗಳು (ಉದಾ.: ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (ಆರ್‌ಎಂಎಸ್‌ಎ) ಕರ್ನಾಟಕ).
- ಸಂಪನ್ಮೂಲ ಕೇಂದ್ರಗಳು– ಜಿಲ್ಲೆಗಳು, ಕ್ಷೇತ್ರ ಮತ್ತು ವಲಯ ಕೇಂದ್ರಗಳು, ಪಠ್ಯಕ್ರಮದ ಸಾಮಗ್ರಿಗಳ ಭಂಡಾರವಾಗಿ ಹೇರಳವಾದ ಸಂಪನ್ಮೂಲಗಳನ್ನು (ಮುದ್ರಣ ಮತ್ತು ಡಿಜಿಟಲ್) ಹೊಂದಿದ್ದು, ಶಿಕ್ಷಕರಿಗೆ ತಮ್ಮ ತರಗತಿಗಳಿಗೆ ತಯಾರಿ ಮತ್ತು ಸ್ವಯಂ ನಿರ್ದೇಶಿತ ಅಧ್ಯಯನದಲ್ಲಿ ಕೆಲಸ ಮಾಡಲು ಸಹಾಯ ಮಾಡುತ್ತವೆ.
- ಪ್ರಾತ್ಯಕ್ಷಿಕೆ ತರಗತಿಗಳು– ತಮ್ಮ ವಿಷಯದಲ್ಲಿ ಹಾಗೂ ಬೋಧನಾ ವಿಧಾನದಲ್ಲಿ ಉತ್ತಮರಾಗಿರುವ ಶಿಕ್ಷಕರು, ಪ್ರದರ್ಶನ ತರಗತಿಗಳನ್ನು ಇತರ ಶಿಕ್ಷಕರು ವೀಕ್ಷಿಸಲು ಮತ್ತು ಕಲಿಯಲು ಆಯೋಜಿಸಬಹುದು. ಅಂತಹ ಭಂಡಾರವನ್ನು ಅಭಿವೃದ್ಧಿಪಡಿಸಲು ಪ್ರಾತ್ಯಕ್ಷಿಕೆ ತರಗತಿಗಳಲ್ಲಿ ಐಸಿಟಿಯನ್ನು ಬಳಸಬಹುದು ಹಾಗೂ ಎಲ್ಲಾ ಶಿಕ್ಷಕರೊಂದಿಗೆ ಹಂಚಿಕೊಳ್ಳಬಹುದು.
- ಸಂಶೋಧನೆ/ಉನ್ನತ ಅಧ್ಯಯನಗಳಿಗೆ ವೇತನಸಹಿತ ರಜೆ; ವಿಚಾರ ಸಂಕಿರಣಗಳು, ಅನುಭವ ಪಡೆದುಕೊಳ್ಳುವ ಸಲುವಾಗಿ ಮಾಡುವ ಭೇಟಿಗಳು, ವೃತ್ತಿಪರ ಪತ್ರಿಕೆಗಳಿಗೆ ಪ್ರವೇಶ ಮತ್ತು ಇ-ಕಲಿಕಾ ಸಮುದಾಯಗಳು ಇತ್ಯಾದಿ.

### ಶಿಕ್ಷಕ ಶಿಕ್ಷಣ ಮತ್ತು ಶಿಕ್ಷಕರ ವೃತ್ತಿಪರ ಅಭಿವೃದ್ಧಿ/ಶಿಕ್ಷಕರ ಶಿಕ್ಷಕರು

ಬೋಧನೆ ಒಂದು ವೃತ್ತಿ ಮತ್ತು ಶಿಕ್ಷಕರು ವೃತ್ತಿಪರರು. ಆದ್ದರಿಂದ, ಈ ವೃತ್ತಿಯಲ್ಲಿ ಒಂದು ನಿರ್ದಿಷ್ಟ ಮಾನದಂಡವನ್ನು ಕಾಯ್ದುಕೊಳ್ಳುವ ಅವಶ್ಯಕತೆಯಿದೆ. ಆದರೆ, ನಮ್ಮ ಶಿಕ್ಷಕರ ಅರ್ಹತಾ ಮಾನದಂಡಗಳು ಅದನ್ನು ಸೂಚಿಸುವುದಿಲ್ಲ. ನಮ್ಮ ದೇಶದ ಪ್ರಾಥಮಿಕ ಶಾಲೆಯಲ್ಲಿ ಕಲಿಸಬೇಕಾದರೆ ಶಿಕ್ಷಕರಿಗೆ ಡಿಪ್ಲೊಮಾ ಪದವಿಯು ಒಂದು ಮೂಲಭೂತ ಅರ್ಹತೆಯಾಗಿದೆ. ಇದನ್ನು ಹನ್ನೆರಡನೆಯ ತರಗತಿ ನಂತರ ಎರಡು ವರ್ಷಗಳ ಕಾಲ ಅಧ್ಯಯನ ಮಾಡುವ ಮೂಲಕ ಪಡೆದುಕೊಳ್ಳಲಾಗುತ್ತದೆ ಮತ್ತು ಇದನ್ನು ಅನೇಕ ಹೆಸರುಗಳಿಂದ ಕರೆಯಲಾಗುತ್ತದೆ. ಆದರೆ ಇದನ್ನು ಸಾಮಾನ್ಯವಾಗಿ ಡಿ.ಎಡ್. (ಶಿಕ್ಷಣದಲ್ಲಿ ಡಿಪ್ಲೊಮಾ) ಎಂದು ಕರೆಯುತ್ತೇವೆ. ನಮ್ಮ ಯಾವುದೇ ಮಾಧ್ಯಮಿಕ ಶಾಲೆಗಳಲ್ಲಿ ಶಿಕ್ಷಕರಾಗಲು, ನಿಮಗೆ ಶಿಕ್ಷಣದಲ್ಲಿ ಪದವಿ (ಬಿ.ಎಡ್.– ಬ್ಯಾಚುಲರ್ ಇನ್ ಎಜುಕೇಶನ್) ಬೇಕಿದೆ, ಇದು ಇತ್ತೀಚಿನವರೆಗೂ ಪದವಿ ನಂತರ ಒಂಬತ್ತು ತಿಂಗಳಲ್ಲಿ ಪಡೆದು ಕೊಳ್ಳಬಹುದಾಗಿತ್ತು! 2014ರ ರಾಷ್ಟ್ರೀಯ ಶಿಕ್ಷಕ ಶಿಕ್ಷಣ ಕೇಂದ್ರ (ಎನ್‌ಸಿಟಿಇ) ತಿದ್ದುಪಡಿಗಳು ಅವಧಿಯನ್ನು ಎರಡು ವರ್ಷಗಳಿಗೆ ಹೆಚ್ಚಿಸಿವೆ (ಎನ್‌ಸಿಟಿಇ, 2014). ದುರದೃಷ್ಟವಶಾತ್, ನಮ್ಮ ಪೂರ್ವ-ಪ್ರಾಥಮಿಕ ವ್ಯವಸ್ಥೆಗಳಲ್ಲಿ 'ಶಿಕ್ಷಕ'ರಾಗಲು ನಿಮಗೆ ಯಾವುದೇ ಅರ್ಹತೆಯ ಅಗತ್ಯವಿಲ್ಲ!

ದೇಶದ ಶಿಕ್ಷಕ ಶಿಕ್ಷಣ (ಟಿಇ) ಕಾರ್ಯಕ್ರಮಗಳ ಒಳಾಂಶಗಳನ್ನು ಪರಿಶೀಲಿಸದೆಯೇ ನಾವು ಕೇವಲ ಅವುಗಳ ಅವಧಿಯ ಮೂಲಕವೇ ಕಾರ್ಯಕ್ರಮಗಳ ಅಸಮರ್ಪಕತೆಯನ್ನು ನೋಡಬಹುದು. ಇತ್ತೀಚಿನವರೆಗೂ, 15 ವರ್ಷದ ಮಕ್ಕಳಿಗೆ ಕಲಿಸಲು ಒಂಬತ್ತು ತಿಂಗಳ ಕೋರ್ಸ್‌ನಿಂದ ಪಡೆದ ವೃತ್ತಿಪರ ಅರ್ಹತೆಯ ಅಗತ್ಯವಿತ್ತು! ಶಿಕ್ಷಕ ಶಿಕ್ಷಣದ ರಾಷ್ಟ್ರೀಯ ಮಂಡಳಿಯು (ಎನ್‌ಸಿಟಿಇ) ಶಿಕ್ಷಣ ಪದವಿ (ಬಿ.ಇಡಿ) ಹಾಗೂ ಸ್ನಾತಕೋತ್ತರ ಶಿಕ್ಷಣ ಪದವಿ (ಎಮ್. ಇಡಿ.– ಶಿಕ್ಷಕ ಶಿಕ್ಷಕರಾಗಲು ಇದು ಕಡ್ಡಾಯ.) ಎರಡರ ಅವಧಿಯನ್ನು ಎರಡು ವರ್ಷಗಳಿಗೆ ಹೆಚ್ಚಿಸಲು ಬಹಳ ಸಮಯವನ್ನು ತೆಗೆದುಕೊಂಡಿತು. ಮಾತ್ರವಲ್ಲ, ಪಠ್ಯಕ್ರಮದಲ್ಲಿ ಅಲ್ಪಪ್ರಮಾಣದ ಸುಧಾರಣೆಯೊಂದಿಗೆ ಕೇವಲ ಕೋರ್ಸಿನ ಅವಧಿಯನ್ನು ಮಾತ್ರ ಹೆಚ್ಚಿಸುವುದು ಅನಗತ್ಯ. ಅದು ಯಾವುದೇ ಅಪೇಕ್ಷಣೀಯ ಬದಲಾವಣೆಯನ್ನು ತರಲು ಸಂಪೂರ್ಣವಾಗಿ ವಿಫಲವಾಗಿದೆ.

ಶಿಕ್ಷಕರಿಗೆ ತರಬೇತಿ ನೀಡುವ ಪ್ರಕ್ರಿಯೆಯ ಗುಣಮಟ್ಟದಲ್ಲಿ ಮೂಲಭೂತ ಬದಲಾವಣೆಯಿಲ್ಲದಿದ್ದರೆ ಶಿಕ್ಷಕರ ಶಿಕ್ಷಣದಲ್ಲಿ ಯಾವುದೇ ದೀರ್ಘಾವಧಿಯ ಬದಲಾವಣೆಗಳು ಸಂಭವಿಸುವುದಿಲ್ಲ. ಇದು ಪಠ್ಯಕ್ರಮ, ಅವಧಿ ಮತ್ತು ಸಾಂಸ್ಥಿಕ ಗುಣಮಟ್ಟದ ವಿಷಯಗಳನ್ನು ಒಳಗೊಂಡಿದೆ. ಶಿಕ್ಷಕರಿಗೆ ಅಗತ್ಯವಾದ ಅರ್ಹತೆ ಮತ್ತು ಶಿಕ್ಷಕ ಶಿಕ್ಷಣದ (ಟಿಇ) ಅವಧಿ– ಈ ಎರಡನ್ನೂ ಸಂತುಲಿತಗೊಳಿಸುವುದು ಈ ಪ್ರದೇಶದಲ್ಲಿ ಅಗತ್ಯವಿರುವ ಪ್ರಮುಖ ಸುಧಾರಣೆಯಾಗಿದೆ.

- ದೇಶಾದ್ಯಂತ ಶಿಕ್ಷಕರಾಗಲು ಕೇವಲ ಒಂದು ಆಯ್ಕೆಯನ್ನು ಒದಗಿಸಿ ಮತ್ತು ಆ ಆಯ್ಕೆಯು ವಿಷಯ (ಭಾಷೆ, ಗಣಿತ, ಇತ್ಯಾದಿ) ಮತ್ತು ಶ್ರೇಣಿಯ ಮಟ್ಟಗಳಲ್ಲಿ (ಪ್ರಾಥಮಿಕ ಬೋಧನೆ, ಮಾಧ್ಯಮಿಕ ಬೋಧನೆ ಮತ್ತು ಬಾಲ್ಯದ ಶಿಕ್ಷಣ) ವಿಶೇಷ ಆಯ್ಕೆಗಳೊಂದಿಗೆ 4 ವರ್ಷದ ಸಂಯೋಜಿತ ಶಿಕ್ಷಕ ಶಿಕ್ಷಣ ಕಾರ್ಯಕ್ರಮವಾಗಿರಬೇಕು.

ಪ್ರಸ್ತುತ ಸೇವಾನಿರತ ಶಿಕ್ಷಕ ಶಿಕ್ಷಣವು ವೃತ್ತಿನಿರತ (practicing) ಶಿಕ್ಷಕರ ಅವಶ್ಯಕತೆಗಳನ್ನು ಪೂರೈಸುತ್ತಿಲ್ಲ. ಕಳಪೆ ಒಳಸುರಿ (ಇನ್‌ಪುಟ್), ಸಂಪನ್ಮೂಲಗಳ ಕೊರತೆ ಮತ್ತು ವೃತ್ತಿಪರ

[3] NCTE Act 2014 ncte-india.org/ncte_new/?page_id=910

ನಿರ್ಬಂಧಗಳ ಕಾರಣದಿಂದಾಗಿ ಶಿಕ್ಷಕರಿಗೆ ನೀಡಲಾಗುವ ಶೈಕ್ಷಣಿಕ ಬೆಂಬಲದ ಉತ್ತಮ ಗುಣಮಟ್ಟವು ಅಪೇಕ್ಷಿತವಾಗಿರುತ್ತದೆ.

ಈ ನಿಟ್ಟಿನಲ್ಲಿ ಪ್ರಮುಖ ಸುಧಾರಣಾ ಕಲ್ಪನೆ ಹೀಗಿದೆ:

- ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮಗಳಿಗೆ ಆಯ್ಕೆಯನ್ನು ಕಲ್ಪಿಸಲು ಸೇವಾನಿರತೆಯಿಂದ ಗುರುತಿಸಬೇಕು. ಸಂಬಂಧಪಟ್ಟ ಶಿಕ್ಷಕ ಶಿಕ್ಷಣ ಸಂಸ್ಥೆಗಳ ಶಿಕ್ಷಕರ ಆಯ್ಕೆಗಾಗಿ ಒಂದು ವರ್ಷದ ಪಠ್ಯಕ್ರಮ(ಕೋರ್ಸ್)ಕ್ಕೆ ಸಂಬಂಧಪಟ್ಟ ಕ್ಯಾಲೆಂಡರ್ ಅನ್ನು ಪ್ರಸ್ತುತಪಡಿಸಬೇಕು; ಅದೇ ರೀತಿಯಲ್ಲಿ, ಕಠಿಣ ಆಯ್ಕೆ ಮಾನದಂಡಗಳ ಆಧಾರದ ಮೇಲೆ ಶಿಕ್ಷಕರಿಗೆ ಸಬ್ಬಟಿಕಲ್ಸ್(ಅಧ್ಯಯನ, ಪ್ರವಾಸ, ಮೊದಲಾದವಕ್ಕಾಗಿ ಕೊಡುವ ರಜೆ), ಫೆಲೋಶಿಪ್‌ಗಳು, ಸಂಶೋಧನೆಗೆ ಬೆಂಬಲ, ಅಧ್ಯಾಪಕರ ವಿನಿಮಯ ಮತ್ತು ಗುರುತಿಸಲಾದ ಸಂಸ್ಥೆಗಳಿಗೆ ಅವರ ವೃತ್ತಿಪರ ಅಭಿವೃದ್ಧಿಯ ಭಾಗವಾಗಿ ಮಾನ್ಯತೆ ಭೇಟಿಗಳನ್ನು ನೀಡಬೇಕು.

**ಶಿಕ್ಷಕ ತರಬೇತಿಯ ಶಿಕ್ಷಕರ ಗುಣಮಟ್ಟ**

ಶಿಕ್ಷಕರ ಗುಣಮಟ್ಟದಲ್ಲಿ ಗಣನೀಯ ಮತ್ತು ಸುಸ್ಥಿರ ಸುಧಾರಣೆಯನ್ನು ತರಲು ಶಿಕ್ಷಕ ತರಬೇತಿಯ ಶಿಕ್ಷಕರ ಗುಣಮಟ್ಟವನ್ನು ಸುಧಾರಿಸುವುದು ಮತ್ತು ಸುಸ್ಥಿರಗೊಳಿಸುವುದು ನಿರ್ಣಾಯಕ ವಾಗುತ್ತದೆ. ಶಿಕ್ಷಕ ಶಿಕ್ಷಕರ ಗುಣಮಟ್ಟದ ಸುಧಾರಣೆಗೆ ಕೆಲವು ವಿಚಾರಗಳೆಂದರೆ– ಸ್ನಾತಕೋತ್ತರ ಪದವಿ(ಎಂ.ಎಡ್.) ಪಠ್ಯಕ್ರಮ, ಅವಧಿ ಮತ್ತು ರಚನೆಯನ್ನು ಪರಿಷ್ಕರಿಸುವುದು; ಶಿಕ್ಷಕ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟನ್ನು ಆಧರಿಸಿದ ಕಾರ್ಯಕ್ರಮ (2009) ಮತ್ತು ವೃತ್ತಿಪರ ಸಂವಹನ ಮತ್ತು ಅಭಿವೃದ್ಧಿಗಾಗಿ ಭೌತಿಕ ಮತ್ತು ಐಸಿಟಿಯಿಂದ ಬಲಗೊಂಡ ವರ್ಚುವಲ್ ವೇದಿಕೆಗಳನ್ನು ಒಳಗೊಂಡಂತೆ ಶಿಕ್ಷಕ ತರಬೇತಿಯ ಶಿಕ್ಷಕರ ಸ್ವಯಂಪ್ರೇರಿತ ವೃತ್ತಿಪರ ಜಾಲಗಳ ಸ್ಥಾಪನೆ ಮಾಡುವುದು... ಹೀಗೆ.

ಸ್ನಾತಕೋತ್ತರ ಶಿಕ್ಷಣ ಪದವಿಯ (ಎಂ.ಎಡ್.) ಅವಧಿಯನ್ನು ಹೆಚ್ಚಿಸುವ ಮೂಲಕ ಶಿಕ್ಷಕ ಶಿಕ್ಷಕರ ಸಿದ್ಧತೆಯನ್ನು ಸುಧಾರಿಸುವ ಮೊದಲ ಹೆಜ್ಜೆಯಾಗಿ ಎರಡು ವರ್ಷಗಳ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ಅಂತಹ ಪರಿಷ್ಕರಿಸಿದ ಕಾರ್ಯಕ್ರಮವನ್ನು ನಡೆಸಲು ಸಮರ್ಥವಾಗಿರುವ ಎಲ್ಲ ರಾಜ್ಯಗಳಲ್ಲಿ ದೇಶಾದ್ಯಂತ ಕನಿಷ್ಠ ನೂರು ಸಂಸ್ಥೆಗಳನ್ನು ಗುರುತಿಸಿ ಅಂತಹ ಕಾರ್ಯಕ್ರಮಗಳನ್ನು ತಲುಪಿಸಲು ಸಿದ್ಧವಾಗಿದೆ.

ಶಿಕ್ಷಕ ತರಬೇತಿಯ ಶಿಕ್ಷಕರಿಗೆ ಅಥವಾ ಶಿಕ್ಷಣತಜ್ಞರಿಗೆ ಸಂಬಂಧಿಸಿದಂತೆ ಪ್ರಮುಖ ಸುಧಾರಣಾ ಕಲ್ಪನೆಗಳು ಹೀಗಿದೆ:

- 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಶಿಫಾರಸ್ಸು ಮಾಡಿದಂತೆ ಪ್ರತಿ ರಾಜ್ಯದಲ್ಲಿ ಕನಿಷ್ಠ 500 ಅತ್ಯುತ್ತಮ ಶಿಕ್ಷಕ ತರಬೇತಿಯ ಶಿಕ್ಷಕರ ಗುಂಪನ್ನು ಮತ್ತು ಪ್ರತಿ ರಾಜ್ಯದ ಶಿಕ್ಷಕ ತರಬೇತಿಯ ಶಿಕ್ಷಕರಿಗೆ ಪ್ರತ್ಯೇಕ **ಕೇಡರ್** ಅನ್ನು ಅಭಿವೃದ್ಧಿಪಡಿಸುವುದು.

**ಶಿಕ್ಷಕರ ನಿರ್ವಹಣೆ:**
**ಆಚರಣೆಯಲ್ಲಿರುವ ಸಂಗತಿಗಳು ಮತ್ತು ನೀತಿಗಳು**

1950ರ ದಶಕದ ನಂತರದ ಎಲ್ಲಾ ಪ್ರಮುಖ ವರದಿಗಳು ವ್ಯವಸ್ಥೆಯೊಳಗೆ ಶಿಕ್ಷಕರ ನಿರ್ವಹಣೆ ಸಂಬಂಧಿತ ಸೂಚಕಗಳ ಮೇಲೆ ಕೇಂದ್ರೀಕರಿಸುವ ಮಹತ್ವವನ್ನು ಒತ್ತಿಹೇಳುತ್ತವೆ. 1964ರ ರಾಷ್ಟ್ರೀಯ ಶಿಕ್ಷಣ ಆಯೋಗ, ರಾಷ್ಟ್ರೀಯ ಶಿಕ್ಷಣ ನೀತಿ 1968, 1986 ಮತ್ತು 1992ರಂತಹ ನೀತಿ ದಾಖಲೆಗಳಲ್ಲಿ ಇದು ಚಾಲನೆಯಲ್ಲಿರುವ ವಿಷಯವಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್‌ಇಪಿ 1986) 'ಶಿಕ್ಷಕರ' ಕುರಿತು ಒಂದು ವಿಭಾಗವನ್ನು ಮೀಸಲಿರಿಸಿದೆ.

**ಶಿಕ್ಷಕರ ಸ್ವಾಯತ್ತತೆಯ ಅಗತ್ಯತೆ**

ಸಾಮಾಜಿಕ, ಸಾಂಸ್ಕೃತಿಕ ಮತ್ತು ಭಾಷಾ ಅಡೆತಡೆಗಳನ್ನು ಮಾತನಾಡುವಾಗ ಮಕ್ಕಳು ಎದುರಿಸುತ್ತಿರುವ ತೊಂದರೆಗಳನ್ನು ಮೊದಲ ಬಾರಿಗೆ ಅನುಭವಿಸುವವರು ಶಿಕ್ಷಕರು. ಶಾಲೆಯಿಂದ ಹೊರಗುಳಿಯುವ ಪ್ರತಿಯೊಂದು ಮಗುವನ್ನು ವಿದ್ಯಾರ್ಥಿಯಾಗಿ ಪರಿವರ್ತಿಸಬೇಕು. ಕೇಂದ್ರ, ರಾಜ್ಯ, ಅಥವಾ ಜಿಲ್ಲಾ ಮಟ್ಟದಲ್ಲಿ ನಿಗದಿಪಡಿಸಿದ ಗುರಿಗಳ ಬದಲು, ಪ್ರತಿ ಶಾಲೆ ಮತ್ತು ಪ್ರತಿ ಶಿಕ್ಷಕರಿಗೆ ತನ್ನದೇ ಆದ ದೃಷ್ಟಿಯನ್ನು ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ಯೋಜಿಸಲು ಅವಕಾಶ ನೀಡಬೇಕು. ಆದಾಗ್ಯೂ, ಶಿಕ್ಷಕರ ತರಬೇತಿ ಪ್ರಕ್ರಿಯೆ ಸರ್ವ ಶಿಕ್ಷಣ ಅಭಿಯಾನ (ಎಸ್‌ಎಸ್‌ಎ) ಕೇಂದ್ರಿತವಾಗಿಯೇ ನಡೆಯುತ್ತಿದೆ. ಶಾಲೆಗಳು ಮತ್ತು ಶಿಕ್ಷಕರಿಗೆ ಒದಗಿಸುವ ಸ್ವಾಯತ್ತತೆ ಪ್ರತ್ಯೇಕವಾಗಿ ಇರುವುದಿಲ್ಲ. ಇದು ವಿವಿಧ ಹಂತಗಳೊಂದಿಗೆ ಮತ್ತು ರಾಜ್ಯ ಮಟ್ಟದ ಸಂಸ್ಥೆಗಳಿಗೆ ಸ್ವಾಯತ್ತತೆಯನ್ನು ನೀಡುವುದರೊಂದಿಗೆ ಪ್ರಾರಂಭವಾಗುತ್ತದೆ, ನಂತರ ಜಿಲ್ಲಾ ಮಟ್ಟದ ಸಂಸ್ಥೆಗಳಾದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(DIET)ಗಳವರೆಗೆ ವಿಸ್ತರಿಸಲ್ಪಡುತ್ತದೆ. ಶಾಲೆಗಳು ಮತ್ತು ಶಿಕ್ಷಕರ ಮಟ್ಟದಲ್ಲಿ ಅಗತ್ಯವಾಗುವ ಬದಲಾವಣೆಗಳಿಗಾಗಿ ಈ ಮಾದರಿಯ ಪಲ್ಲಟಗಳನ್ನು ಮಾತ್ರ ಅನುಮತಿಸುತ್ತದೆ.

**ಶಿಕ್ಷಕರ ನೇಮಕಾತಿ, ಬಡ್ತಿ ಮತ್ತು ವರ್ಗಾವಣೆ**

ಪ್ರಸ್ತುತ ದೇಶವು ತರಬೇತಿ ಪಡೆದ ಶಿಕ್ಷಕರ ತೀವ್ರ ಕೊರತೆಯನ್ನು ಮತ್ತು ಕೆಲಸ ಮಾಡುತ್ತಿರುವ ಶಿಕ್ಷಕರಲ್ಲಿ ಸೂಕ್ತ ಗುಣಮಟ್ಟದ ಕೊರತೆಯನ್ನು ಎದುರಿಸುತ್ತಿದೆ. ಇಡೀ ರಾಷ್ಟ್ರದ ಸರಾಸರಿ ವಿದ್ಯಾರ್ಥಿ–ಶಿಕ್ಷಕ ಅನುಪಾತವು (ಪಿಟಿಆರ್) ಪ್ರಾಥಮಿಕ ಹಂತದಲ್ಲಿ 24:1 ಇದೆ, ಮತ್ತು ಹಿರಿಯ ಪ್ರಾಥಮಿಕದಲ್ಲಿ 17:1ರಷ್ಟು ಇದೆ (ಯು–ಡಿಐಎಸ್‌ಇ 2014– 15) ಎಂಬುದು ಶ್ಲಾಘನೀಯ; 39:1 ಹೊಂದಿರುವ ಉತ್ತರ ಪ್ರದೇಶವು ದೇಶದ ಅತಿದೊಡ್ಡ ವಿದ್ಯಾರ್ಥಿ–ಶಿಕ್ಷಕ ಅನುಪಾತವನ್ನು (ಪಿಟಿಆರ್) ಹೊಂದಿದೆ! ಆದಾಗ್ಯೂ, ಈ ಸರಾಸರಿಗಳು ನಿಜವಾದ ಚಿತ್ರವನ್ನು ಬಹಿರಂಗಪಡಿಸುವುದಿಲ್ಲ ಎಂದು ಎಲ್ಲರಿಗೂ ತಿಳಿದಿದೆ. ಶಿಕ್ಷಕರ ಸಂಖ್ಯೆಗೆ ಹೋಲಿಸಿದರೆ ಹೆಚ್ಚಿನ ಪ್ರಮಾಣದಲ್ಲಿ ವಿದ್ಯಾರ್ಥಿಗಳನ್ನು ಹೊಂದಿರುವ ಶಾಲೆಗಳಿವೆ ಮತ್ತು ಹಲವೆಡೆ ಇದು ವಿರುದ್ಧವಾಗಿದೆ. ದೇಶಾದ್ಯಂತ ಲಕ್ಷಕ್ಕೂ ಹೆಚ್ಚು ಶಾಲೆಗಳು ಏಕೋಪಾಧ್ಯಾಯ ಶಾಲೆಗಳಾಗಿ ಉಳಿದಿವೆ (ಎಂಎಚ್‌ಆರ್‌ಡಿ, ವಾರ್ಷಿಕ ವರದಿ, 2014–15). ಶಿಕ್ಷಕರು ಶಾಲೆಯೇತರ ಕೆಲಸಗಳಲ್ಲಿ

ಯಾವಾಗಲೂ ಭಾಗಿಯಾಗುವುದರಿಂದ, ಈ ಏಕೋಪಾಧ್ಯಾಯ ಶಾಲೆಗಳಲ್ಲಿ ಶಿಕ್ಷಕರಿಗೆ ವಿದ್ಯಾರ್ಥಿಗಳೊಂದಿಗೆ ಹೆಚ್ಚಿನ ಸಮಯವನ್ನು ಕಳೆಯಲು ಆಗುವುದಿಲ್ಲ.

ಇದಲ್ಲದೆ, ನುರಿತ ವಿಷಯಗಳ ಬೋಧನೆಗೆ ವಿಶೇಷವಾಗಿ ದೂರದ ಮತ್ತು ಬುಡಕಟ್ಟು ಪ್ರದೇಶಗಳಲ್ಲಿ ತೀವ್ರವಾಗಿ ಶಿಕ್ಷಕರ ಕೊರತೆ ಇದೆ. ಇದಕ್ಕೆ ಹೆಚ್ಚುವರಿಯಾಗಿ, ಮಾಧ್ಯಮಿಕ ಹಂತದಲ್ಲಿ, ದೇಶಾದ್ಯಂತ ವಿಜ್ಞಾನ, ಗಣಿತ ಮತ್ತು ಭೂಗೋಳಶಾಸ್ತ್ರ ಶಿಕ್ಷಕರ ಕೊರತೆಯು ಮುಂದಿನ ದಿನಗಳಲ್ಲಿ ತೀವ್ರವಾಗಲಿದೆ. ವಿದ್ಯಾರ್ಥಿಗಳ ಕೊರತೆಯಿಂದ ಕೆಲವೆಡೆ ಹಲವಾರು ವಿಜ್ಞಾನ ಪದವಿ ಕಾರ್ಯಕ್ರಮಗಳನ್ನು ಮುಚ್ಚಲಾಗುತ್ತಿದೆ. ವಿಜ್ಞಾನ ಮತ್ತು ಗಣಿತಶಾಸ್ತ್ರದ ಶಿಕ್ಷಕರನ್ನು ನಾವು ಮಾಧ್ಯಮಿಕ ಹಂತದಲ್ಲಿ ಬೆಳೆಸುವ ಮಾರ್ಗವಿದು. ಈ 'ಮಾರ್ಗವನ್ನು' ಮುಚ್ಚಿದರೆ, ಮಾಧ್ಯಮಿಕ ಹಂತದಲ್ಲಿ ಅರ್ಹ ವಿಜ್ಞಾನ ಮತ್ತು ಗಣಿತ ಶಿಕ್ಷಕರ ಲಭ್ಯತೆಯ ಬಿಕ್ಕಟ್ಟು ಗಮನಾರ್ಹವಾಗಿ ಹೆಚ್ಚುತ್ತದೆ.

ಒಂದು ಕಡೆ ಹೊಸ ಶಿಕ್ಷಕರ ಗಂಭೀರ ಕೊರತೆಯಿದೆ ಮತ್ತು ಇನ್ನೊಂದೆಡೆ ವೃತ್ತಿನಿರತ ಶಿಕ್ಷಕರಲ್ಲಿ ಶೇಕಡಾವಾರು ಗುಣಮಟ್ಟದ ಕೊರತೆಯಿದೆ. ಇದರ ಜೊತೆಗೆ ಸ್ವಜನಪಕ್ಷಪಾತವು ಬೃಹತ್ ಸಮಸ್ಯೆಯಾಗಿದ್ದು, ಇದು ಶಿಕ್ಷಕರ ನೇಮಕಾತಿ ಮತ್ತು ನಿರ್ವಹಣಾ ಪ್ರಕ್ರಿಯೆಗಳಾದ ಬಡ್ತಿ ಮತ್ತು ವರ್ಗಾವಣೆಗಳಿಗೆ ದೇಶಾದ್ಯಂತ ಕಾರಣವಾಗಿದೆ. ಈಗಾಗಲೇ ಪಡೆದ ಶೈಕ್ಷಣಿಕ ಅರ್ಹತೆಯ ಹೊರತಾಗಿಯೂ ಶಾಲಾ ಮಟ್ಟ ಮತ್ತು ಅದು ಇರುವ ಸ್ಥಳವನ್ನು ಅವಲಂಬಿಸಿ ಸರ್ಕಾರಿ ಶಿಕ್ಷಕರ ಕೆಲಸಕ್ಕಾಗಿ ಸಾಮಾನ್ಯವಾಗಿ ಇಂದು 'ಬೆಲೆ' ನಿಗದಿಪಡಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ದೇಶಾದ್ಯಂತ ಪ್ರಸ್ತುತ ಪದ್ಧತಿಗಳಲ್ಲಿ ಭಾರೀ ವ್ಯತ್ಯಾಸಗಳಿವೆ ಮತ್ತು ರಾಜ್ಯಗಳು ತಾತ್ಕಾಲಿಕ ಕ್ರಮಗಳನ್ನು ಮುಂದುವರಿಸುತ್ತಿವೆ ಎಂದು ಅಧ್ಯಯನಗಳು (ರಾಮಚಂದ್ರನ್ ಮತ್ತು ಇತರರು, ಎನ್‌ಯುಇಪಿಎ, 2015) ತೋರಿಸಿವೆ. ಆದಾಗ್ಯೂ, ಸುಮಾರು ಒಂದು ದಶಕದಿಂದ ಕೆಲವು ರಾಜ್ಯ ಸರ್ಕಾರಗಳು ಸ್ವಜನಪಕ್ಷಪಾತ ಸೇರಿದಂತೆ ಎಲ್ಲಾ ರೀತಿಯ ಭ್ರಷ್ಟಾಚಾರವನ್ನು ತೊಡೆದುಹಾಕಲು ಶಿಕ್ಷಕರ ನಿರ್ವಹಣಾ ಪ್ರಕ್ರಿಯೆಯಲ್ಲಿ ದೊಡ್ಡ ಪ್ರಮಾಣದ ಉಪಕ್ರಮಗಳನ್ನು ಕೈಗೊಂಡಿವೆ. ದಕ್ಷಿಣ ಭಾಗದ ರಾಜ್ಯಗಳು ಈ ನಿಟ್ಟಿನಲ್ಲಿ ಮುಂದಾಗಿ ದಾರಿ ತೋರಿಸಿವೆ ಮತ್ತು ಶಿಕ್ಷಕರ ನೇಮಕಾತಿ ಮತ್ತು ನಿರ್ವಹಣಾ ಪ್ರಕ್ರಿಯೆಗಳನ್ನು ಬಹಳ ಪಾರದರ್ಶಕವಾಗಿಸಿವೆ (ಕರ್ನಾಟಕದ ಉದಾಹರಣೆಗಾಗಿ ಬಾಕ್ಸ್ ಅನ್ನು ನೋಡಿ). ಆದಾಗ್ಯೂ, ಈ ಉತ್ತಮ ಅಭ್ಯಾಸಗಳನ್ನು ದೇಶದ ಎಲ್ಲಾ ರಾಜ್ಯಗಳು ಅನುಕರಿಸಿಲ್ಲ ಮತ್ತು ಅಂತಹ ಸಮಯದವರೆಗೆ, ಈ ಕ್ಷೇತ್ರವನ್ನು ಶಿಕ್ಷಕರ ಪ್ರೇರಣೆಯ ಮೇಲೆ ನೇರ ಪರಿಣಾಮ ಬೀರುವ ಸಮಸ್ಯೆಗಳು ಮಾರಕವಾದ ಪರಿಣಾಮವನ್ನು ಬೀರುತ್ತವೆ ಮತ್ತು ಇದರ ಪರಿಣಾಮವಾಗಿ ನಮ್ಮ ಶಾಲೆಗಳಲ್ಲಿ ನೀಡುವ ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ.

ಕೆಳಗಿನ ಕೋಷ್ಟಕ 2ರಲ್ಲಿ ಕರ್ನಾಟಕ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯಂತಹ ಸ್ಪಷ್ಟ ನಿಯಮಗಳನ್ನು ಜಾರಿಗೆ ತರುವುದು ಶಿಕ್ಷಕರ ನಿರ್ವಹಣೆಯ ಕ್ಷೇತ್ರದಲ್ಲಿನ ಅವ್ಯವಸ್ಥೆಯನ್ನು ನಿವಾರಿಸುವ ಮೊದಲ ಹೆಜ್ಜೆಯಾಗಿದೆ. ಒಮ್ಮೆ ಶಿಕ್ಷಕರ ವಿಶ್ವಾಸವನ್ನು ಗಳಿಸಿದ ನಂತರ ಶಿಕ್ಷಕ ಸಮುದಾಯಕ್ಕೆ ಅಲ್ಲಿ ಅನ್ಯಾಯವಾಗುತ್ತಿಲ್ಲ ಎನ್ನುವುದು ಮನದಟ್ಟಾಗುತ್ತದೆ, ಆಗ ಪರಿವರ್ತನೆ ಪ್ರಾರಂಭವಾಗುತ್ತದೆ. ಆಗ ಕಠಿಣವಾದ ಸುಧಾರಣೆಗಳನ್ನು ತರಲು ಸಕಾರಾತ್ಮಕ ಭಾವನೆಯನ್ನು ತುಂಬುವ ನಿಟ್ಟಿನಲ್ಲಿ ಮುಂದುವರೆಯಬಹುದು.

**ಕೋಷ್ಟಕ 2: ಕರ್ನಾಟಕದಲ್ಲಿ ಶಿಕ್ಷಕರ ವರ್ಗಾವಣೆಯ ನಿಯಮಗಳು**

| ನಿಯಮಗಳು | ಪ್ರಾಥಮಿಕ ಶಾಲಾ ಶಿಕ್ಷಕರು | ಮಾಧ್ಯಮಿಕ ಶಾಲಾ ಶಿಕ್ಷಕರು |
|---|---|---|
| **ಹಿರಿಯ ಶಿಕ್ಷಕ ಘಟಕ** | ಜಿಲ್ಲಾ ಮಟ್ಟದ ವಿಭಾಗ | ವಿಭಾಗೀಯ ಮಟ್ಟ |
| **ಸಕ್ಷಮ ಪ್ರಾಧಿಕಾರ** | ಕ್ಷೇತ್ರ ಶಿಕ್ಷಣ ಅಧಿಕಾರಿ (ಬಿಇಒ) (ನೇಮಕಾತಿ ಪ್ರಾಧಿಕಾರ) | ಸಾರ್ವಜನಿಕ ಶಿಕ್ಷಣ ಉಪನಿರ್ದೇಶಕರು (ಡಿಡಿಪಿಐ): ಜಿಲ್ಲಾ ಮಟ್ಟ (ನೇಮಕಾತಿ ಪ್ರಾಧಿಕಾರ) |
| | ಸಾರ್ವಜನಿಕ ಶಿಕ್ಷಣ ಉಪನಿರ್ದೇಶಕರು (ಡಿಡಿಪಿಐ); (ಆಯ್ಕೆ ಪ್ರಾಧಿಕಾರ) | ಸಾರ್ವಜನಿಕ ಶಿಕ್ಷಣ ಜಂಟಿ ನಿರ್ದೇಶಕರು (ಜೆಡಿಪಿಐ); ವಿಭಾಗ ಮಟ್ಟ (ಆಯ್ಕೆ ಪ್ರಾಧಿಕಾರ) |
| **ವರ್ಗಾವಣೆ ಮೂಲಕ ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳ ಲೆಕ್ಕಾಚಾರ** | ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ(PTR) = 40 | ವಿಷಯವಾರು ಸಿಬ್ಬಂದಿ |
| **ಗಣಕೀಕೃತ ಆಯ್ಕೆ ಪ್ರಕ್ರಿಯೆ** | ಹೌದು | |
| **ವರ್ಗಾವಣೆಗಾಗಿ ಗರಿಷ್ಠ ಮಟ್ಟ** | ಹಿರಿಯ ಶಿಕ್ಷಕರ ಘಟಕದ ವ್ಯಾಪ್ತಿಯ ಒಳಗೆ ಕೇಡರ್‌ನ ಶೇ.8ರಷ್ಟು*;<br>ಹಿರಿಯ ಶಿಕ್ಷಕರ ಘಟಕದ ವ್ಯಾಪ್ತಿಯ ಹೊರಗೆ ಶೇ. 1ರಷ್ಟು. | |

* ಇದು 2015ರವರೆಗೆ 5% ಆಗಿದ್ದು, ಇದನ್ನು ಕಾಯಿದೆಯ ತಿದ್ದುಪಡಿಯ ಮೂಲಕ 8%ಕ್ಕೆ ಹೆಚ್ಚಿಸಲಾಯಿತು. .

ಮೂಲ: ಸಿಬಿಪಿಎಸ್, 2015 ರಿಂದ ಉದ್ಧೃತ

**ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ) ಎಲ್ಲಾ ಹೊಸ ನೇಮಕಾತಿಗಳಿಗೆ ಶಿಕ್ಷಕರ ಅರ್ಹತಾ ಪರೀಕ್ಷೆ(ಟಿಇಟಿ)ಗಳನ್ನು ಶಿಫಾರಸ್ಸು ಮಾಡುವ ಮೊದಲೇ, ಕರ್ನಾಟಕದಂತಹ ರಾಜ್ಯಗಳು ಶಿಕ್ಷಕರ ನೇಮಕಾತಿ ಪ್ರಕ್ರಿಯೆಯ ಭಾಗವಾಗಿ ಕೇಂದ್ರೀಕೃತ ಪರೀಕ್ಷೆಯನ್ನು (ಸಾಮಾನ್ಯ ಪ್ರವೇಶ ಪರೀಕ್ಷೆ- ಸಿಇಟಿ) ಜಾರಿಗೆ ತರಲು ವ್ಯವಸ್ಥೆಗಳನ್ನು ಹೊಂದಿದ್ದವು; ಉದಾ., ಇವುಗಳನ್ನು ಸಕ್ರಿಯಗೊಳಿಸಲು ಕೇಂದ್ರೀಕೃತ ಪ್ರವೇಶ ಕೋಶವನ್ನು (ಸಿಎಸಿ) ರಚಿಸಲಾಗಿತ್ತು, ಇದು ಶಿಕ್ಷಕ ಶಿಕ್ಷಣ ಕಾರ್ಯಕ್ರಮಗಳಿಗೆ ಪ್ರವೇಶವನ್ನು ನೀಡುವುದು ಮಾತ್ರವಲ್ಲದೆ ಶಿಕ್ಷಕರ ನೇಮಕಾತಿ ಪರೀಕ್ಷೆಗಳನ್ನು ಸಹ ನಿರ್ವಹಿಸಿತು. ಈ ಅರ್ಹತಾ ಪರೀಕ್ಷೆಗಳನ್ನು ಸಾಮಾನ್ಯ ಪ್ರವೇಶ ಪರೀಕ್ಷೆ(ಸಿಇಟಿ)ಯಲ್ಲಿನ ಶ್ರೇಣಿಯ ಆಧಾರದ ಮೇಲೆ 'ಆಯ್ಕೆ ಪ್ರಕ್ರಿಯೆ'ಯನ್ನು ಅನುಸರಿಸಲಾಯಿತು, ಇದು ಸ್ಥಾಪಿತ ಮಾನದಂಡಗಳಲ್ಲಿ ಶಿಕ್ಷಕನು ತನ್ನ ಮೊದಲ ನಿಯೋಜನೆ ಪಡೆಯುವ ಸ್ಥಳ / ಶಾಲೆಯನ್ನು ನಿರ್ಧರಿಸುತ್ತದೆ.**

### ಶಿಕ್ಷಕರ ಸಂಬಳ

ಸಾರ್ವಜನಿಕ ಶಾಲಾ ವ್ಯವಸ್ಥೆಯ ಶಿಕ್ಷಕರು ಕಡಿಮೆ ಸಂಬಳ ಪಡೆಯುವ ಸರ್ಕಾರಿ ನೌಕರರಲ್ಲಿ ಒಬ್ಬರು ಎಂಬುದು ಜನಪ್ರಿಯ ಗ್ರಹಿಕೆ. ದತ್ತಾಂಶಗಳು ಬೇರೆಯದನ್ನೇ ಸೂಚಿಸುತ್ತದೆ! ರಾಜ್ಯ ಸರ್ಕಾರಗಳು ಪ್ರತಿಪಾದಿಸಿರುವ ಪ್ರಸ್ತುತ ವೇತನವನ್ನು 6ನೇ ವೇತನ ಆಯೋಗದ ಆಧಾರದ ಮೇಲೆ ಮತ್ತು ಕೆಲವು ಸಂದರ್ಭಗಳಲ್ಲಿ ಆಯಾ ರಾಜ್ಯ ಆಯೋಗಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ಪ್ರವೇಶ ಹಂತದಲ್ಲಿ ದೇಶದ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸರಾಸರಿ ತಿಂಗಳಿಗೆ ಸುಮಾರು 20,000 ರೂ. ಮತ್ತು ಸುಮಾರು 10 ವರ್ಷಗಳ ಅನುಭವದ ನಂತರ ಶಿಕ್ಷಕರಿಗೆ ತಿಂಗಳಿಗೆ ಸುಮಾರು 32,000 ರೂ. ನೀಡಲಾಗುತ್ತದೆ. ಸಂಬಳದ ಶ್ರೇಣಿಯು ಪೊಲೀಸ್ ಪೇದೆ, ವಿದ್ಯುತ್ ಕಂಪನಿಯ ಸಹಾಯಕ, ಗ್ರಾಮ ಲೆಕ್ಕಿಗ, ಬ್ಯಾಂಕ್ ನೌಕರರು ಮತ್ತು ರೈಲ್ವೆ ಸ್ಟೇಷನ್ ಮಾಸ್ಟರ್‌ಗಳಿಗಿಂತ ಹೆಚ್ಚಾಗಿದೆ. ಆಯಾ ವೃತ್ತಿಜೀವನದ ಅಂತ್ಯದ ವೇಳೆಗೆ, ವೈದ್ಯರು ಮತ್ತು ದಾದಿಯರು, ಪೊಲೀಸ್ ನಿರೀಕ್ಷಕರು ಮತ್ತು ಬ್ಯಾಂಕ್ ವ್ಯವಸ್ಥಾಪಕರು ಮಾತ್ರ ಅನುಭವಿ ಶಿಕ್ಷಕ / ಮುಖ್ಯ ಶಿಕ್ಷಕರಿಗಿಂತ ಹೆಚ್ಚಿನ ಸಂಬಳ ಪಡೆಯುವ ಗ್ರಾಮೀಣ ಆರ್ಥಿಕತೆಯ ವೃತ್ತಿಪರರಾಗಿದ್ದಾರೆ. ಕೆಳಗಿನ ಕೋಷ್ಟಕವು ಮತ್ತಷ್ಟು ಬೆಳಕನ್ನು ಚೆಲ್ಲುತ್ತದೆ.

6ನೇ ವೇತನ ಆಯೋಗದ ಮೊದಲು ಮತ್ತು ನಂತರ ಕನಿಷ್ಠ ಮತ್ತು ಗರಿಷ್ಠ (ಆಯ್ದ ರಾಜ್ಯಗಳ) 'ಟೇಕ್ ಹೋಮ್' ಸಂಬಳ

| | **6ನೇ ವೇತನ ಆಯೋಗದ ಮೊದಲು** | | **6ನೇ ವೇತನ ಆಯೋಗದ ನಂತರ** | |
|---|---|---|---|---|
| | (ಕನಿಷ್ಠ ) | (ಗರಿಷ್ಠ ) | (ಕನಿಷ್ಠ ) | (ಗರಿಷ್ಠ ) |
| ಸರ್ಕಾರ ಪ್ರಾಥಮಿಕ ಶಾಲಾ ಶಿಕ್ಷಕರು | 8697 | 9630 | 13762 | 21045 |
| ಪ್ರಾ.ಶಾ.ಶಿ. 10 ವರ್ಷ ಅನುಭವ/ ಮುಖ್ಯ ಶಿಕ್ಷಕರು | 11775 | 15635 | 20270 | 39831 |
| ಜಿ.ಶಿ. ಮತ್ತು ತ.ಸಂ./ಮಂಡಲ್ ಶಿ.ಅ./ ಕ್ಷೇ.ಶಿ.ಅ. | 11722 | 14762 | 22762 | 55082 |
| ಜಿ.ಶಿ. ಮತ್ತು ತ.ಸಂ. ಪ್ರಾಂಶುಪಾಲರು / ಜಿ.ಶಿ.ಅ. | 15635 | 35034 | 27547 | 60802 |
| ಅಂಚೆ ಪೇದೆಗಳು(ಪು/ಮ) | 2750 | | 4700 | 18000 |
| ಪ್ರಾ.ಆ.ಕೇಂ. ದಾದಿಯರು | 8427 | 19568 | 16298 | 46333 |
| ಪೊಲೀಸ್ ಪೇದೆ | 6091 | 13691 | 10655 | 31499 |
| ಲೈನ್‌ಮ್ಯಾನ್ (ವಿದ್ಯುತ್ ಇಲಾಖೆ) | | 11228 | | 16983 |
| ಗ್ರಾಮ ಲೆಕ್ಕಿಗರು | | | 5200 | 20200 |
| ಗ್ರಾಮ ಲೆಕ್ಕಿಗರು | | | 5200 | 20200 |
| ನಿಲ್ದಾಣಾಧಿಕಾರಿ -ರೈಲ್ವೆಸ್(@ ಗ್ರಾಮಾಂತರ ಮಟ್ಟದಲ್ಲ ) | | | 14350 | 33000 |
| ಬ್ಯಾಂಕ್ ಅಧಿರಾರಿ | 8118 | | 11495 | 28000 |
| ಅಂಚೆ ಮುಖ್ಯಾಧಿಕಾರ (ಪೋಸ್ಟ್ ಮಾಸ್ಟರ್) | | | | 26076 |
| ಪ್ರಾ.ಆ.ಕೇಂ. ವೈದ್ಯರು | 9809 | 33203 | 26108 | 59287 |
| ಪೊಲೀಸ್ ನಿರೀಕ್ಷಕರು | 9090 | 21637 | 18760 | 49919 |
| ಬ್ಯಾಂಕ್ ವ್ಯವಸ್ಥಾಪಕರು | 18450 | | 20359 | 35100 |

* ಈ ಶ್ರೇಣಿಯು ಅಜೀಂ ಪ್ರೇಮ್‌ಜಿ ಫೌಂಡೇಶನ್ ತನ್ನ ಕ್ಷೇತ್ರ ಸ್ಥಳಗಳಲ್ಲಿ ಸಂಗ್ರಹಿಸಿದ ಪ್ರಾಥಮಿಕ ದತ್ತಾಂಶದ ಕಡಿಮೆ ಮತ್ತು ಅತ್ಯುನ್ನತ ಅಂಶಗಳನ್ನು ಆಧರಿಸಿದೆ
# ಅಂಕಿ-ಅಂಶಗಳು ಒಟ್ಟು ಸಂಬಳವನ್ನು ಪ್ರತಿನಿಧಿಸುತ್ತವೆ (ಮೂಲ + DA + HRA)
^ ಮೇಲೆ ತಿಳಿಸಿದಂತೆ ಪ್ರಾರಂಭಿಕ ಸಂಬಳವು ಕನಿಷ್ಠಕ್ಕಿಂತ ಕಡಿಮೆ ಇರುವ ರಾಜ್ಯಗಳಿವೆ. (ಉದಾ. ತಮಿಳುನಾಡು: 15 ಸಾ.) ಮತ್ತು ಮೇಲೆ ಉಲ್ಲೇಖಿಸಿದಂತೆ ಗರಿಷ್ಠಕ್ಕಿಂತ ಹೆಚ್ಚಿನದು. (ಪಂಜಾಬ್. 36 ಸಾ)

**ಮೂಲ:** ರಾಜ್ಯ ವರದಿಗಳು – ಭಾರತದಲ್ಲಿ ಶಿಕ್ಷಕರ ಕೆಲಸದ ಪರಿಸ್ಥಿತಿಗಳು

ಆದ್ದರಿಂದ, ಶಿಕ್ಷಕರ ವೇತನವು ಇಲ್ಲಿ ಗಮನಹರಿಸಬೇಕಿರುವ ಒಂದು ಅಂಶವಾಗಿದೆ. ಸರ್ಕಾರವು 7ನೆಯ ವೇತನ ಆಯೋಗವನ್ನು ಘೋಷಿಸಿದೆ, ಇದು ಸಂಬಳವನ್ನು ಮತ್ತಷ್ಟು ಹೆಚ್ಚಿಸುತ್ತದೆ, ಇನ್ನೂ 6ನೆಯ ವೇತನ ಆಯೋಗವನ್ನು ಜಾರಿಗೆ ತರಬೇಕಾದ ಕೆಲವು ರಾಜ್ಯಗಳು ತಮ್ಮದೇ ಆದ ವೇತನ ಆಯೋಗಗಳನ್ನು ಸಮನಾಗಿ ಅಥವಾ 7ನೆಯ ವೇತನ ಆಯೋಗದ ಮಾನದಂಡಕ್ಕಿಂತ ಉತ್ತಮವಾಗಿ ಸ್ಥಾಪಿಸುವ ಸಾಧ್ಯತೆಯಿದೆ.

ಶಿಕ್ಷಕ ನಿರ್ವಹಣೆಯ ಇಡೀ ಕ್ಷೇತ್ರದಲ್ಲಿನ ಪ್ರಮುಖ ಸುಧಾರಣಾ ಕಲ್ಪನೆ ಹೀಗಿದೆ:

- ಶಿಕ್ಷಕರ ನಿರ್ವಹಣೆಯನ್ನು ಹೆಚ್ಚು ಪಾರದರ್ಶಕಗೊಳಿಸಿ ಮತ್ತು ಶಿಕ್ಷಕರಿಗೆ ಕನಿಷ್ಠ ತರಗತಿಯೊಳಗೆ ಮತ್ತು ಪಠ್ಯಕ್ರಮವನ್ನು ಬೋಧಿಸಲು ಹೆಚ್ಚಿನ ಪ್ರಮಾಣದ ಸ್ವಾಯತ್ತತೆ ಒದಗಿಸುವುದು. ಪಾರದರ್ಶಕ ನೇಮಕಾತಿ ನೀತಿ ಮತ್ತು ಬಡ್ತಿಗಳು ಮತ್ತು ವರ್ಗಾವಣೆಗಳಿಗೆ ಸ್ಪಷ್ಟ ಮತ್ತು ನ್ಯಾಯೋಚಿತ ಮಾನದಂಡಗಳು ಪರಿಸ್ಥಿತಿಯನ್ನು ಸುಧಾರಿಸಲು ಪ್ರಮುಖವಾಗಿವೆ. ಇದು ಕೆಲವು ರಾಜ್ಯಗಳಲ್ಲಿ ನಡೆದಿದ್ದು ಇತರ ರಾಜ್ಯಗಳಲ್ಲಿ ಇನ್ನೂ ಅನುಸರಣೆ ಆಗಬೇಕಾದ ಅಗತ್ಯವಿದೆ.

**ಶಿಕ್ಷಕ ಶಿಕ್ಷಣದ ರಾಷ್ಟ್ರೀಯ ಮಂಡಳಿಯನ್ನು (ಎನ್‌ಸಿಟಿಇ) ಮರು ವೀಕ್ಷಿಸುವ ಅಗತ್ಯತೆ**

ಕಳೆದ ಒಂದು ದಶಕದಲ್ಲಿ, ರಾಜ್ಯ ಮಟ್ಟದಲ್ಲಿ ಮತ್ತು ಕೆಳಗಿನ ನಿರ್ಣಾಯಕ ಸಂಸ್ಥೆಗಳಿಗಿಂತ ಭಿನ್ನವಾಗಿ, ರಾಷ್ಟ್ರಮಟ್ಟದ ಹೆಚ್ಚಿನ ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸಿವೆ, ಆದರೆ ದುರದೃಷ್ಟವಶಾತ್, ಶಿಕ್ಷಕ ಶಿಕ್ಷಣದ (ಟಿಇ) ಮೇಲೆ ಕೇಂದ್ರೀಕರಿಸಲು ಸ್ಥಾಪಿಸಲಾದ ನಿಯಂತ್ರಕ ಸಂಸ್ಥೆಯ ಅಂದರೆ ಶಿಕ್ಷಕ ಶಿಕ್ಷಣದ ರಾಷ್ಟ್ರೀಯ ಮಂಡಳಿಯ (ಎನ್‌ಸಿಟಿಇ) ಬಗೆಗೆ ಇದನ್ನು ಹೇಳಲಾಗುವುದಿಲ್ಲ.

ಶಿಕ್ಷಕ ಶಿಕ್ಷಣದ ರಾಷ್ಟ್ರೀಯ ಮಂಡಳಿ(ಎನ್‌ಸಿಟಿಇ)ಯನ್ನು ಪ್ರಸ್ತುತ ನಿರೀಕ್ಷಣಾ ನಿಯಂತ್ರಕ ಸಂಸ್ಥೆಯಾಗಿ ಹೆಚ್ಚಾಗಿ ಮೂಲಸೌಕರ್ಯ ಅಗತ್ಯತೆಗಳ ಮೇಲೆ ಕೇಂದ್ರೀಕರಿಸಿದೆ ಹಾಗೂ ವೃತ್ತಿಪರ ಮಾನದಂಡಗಳು, ಶೈಕ್ಷಣಿಕ ಕಠಿಣತೆ ಮತ್ತು ಶಿಕ್ಷಕ ಶಿಕ್ಷಣದಲ್ಲಿ ಪಠ್ಯಕ್ರಮದ ನಾವೀನ್ಯಗಳ ಬಗ್ಗೆ ಯೋಚಿಸಲು ಕಾರಣವಾಗುವ ಸಂಸ್ಥೆಯಾಗಿ ಅಲ್ಲ. ಈಗಾಗಲೇ ಹೇಳಿದಂತೆ, ಶಿಕ್ಷಕ ಶಿಕ್ಷಣವನ್ನು ಸುಧಾರಿಸುವುದು ಭಾರತದಲ್ಲಿ ಶಿಕ್ಷಣವನ್ನು ಸುಧಾರಿಸುವ ಮುಖ್ಯ ಭಾಗವಾಗಿದೆ. ಇದಕ್ಕೆ ವ್ಯವಸ್ಥೆಯ ಮರುವಿನ್ಯಾಸ, ಪಠ್ಯಕ್ರಮ ಮತ್ತು ಕಾರ್ಯಾಚರಣೆಗಳ ಪೂರ್ಣ ಪ್ರಮಾಣದ ಅಗತ್ಯವಿರುತ್ತದೆ. ಅಂತಹ ಪೂರ್ಣ ಪ್ರಮಾಣದ ಪುನರುಜ್ಜೀವನಕ್ಕೆ 'ನಿರೀಕ್ಷಕ'ನಿಗಿಂತ ಒಬ್ಬ 'ಚಾಂಪಿಯನ್'ನ ಅಗತ್ಯವಿದೆ!

ವಾಸ್ತವವಾಗಿ, ಶಿಕ್ಷಕ ಶಿಕ್ಷಣದ ರಾಷ್ಟ್ರೀಯ ಮಂಡಳಿಯ (ಎನ್‌ಸಿಟಿಇ) ಕಾರ್ಯಗಳಲ್ಲಿ ಒಂದಾದ ಶಿಕ್ಷಕ ಶಿಕ್ಷಣದ (ಟಿಇ) ವ್ಯಾಪಾರೀಕರಣವನ್ನು ನಿಲ್ಲಿಸಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವುದರಲ್ಲಿ[4] ಅದು ಒಬ್ಬ ನಿರೀಕ್ಷಕನಾಗಿದ್ದರೂ ಸಹ ವಿಫಲವಾಗಿದೆ. ಶಿಕ್ಷಕ ಶಿಕ್ಷಣದ ಕ್ಷೇತ್ರದಲ್ಲಿ ಒಂದು ದಶಕಕ್ಕೂ ಮೀರಿದ ಅತಿರೇಕದ ಖಾಸಗೀಕರಣವನ್ನು, ವಾಣಿಜ್ಯೀಕರಣವನ್ನು ನಿಲ್ಲಿಸಲು ಅಸಮರ್ಥವಾಗಿ ಸಂಪೂರ್ಣ ವೈಫಲ್ಯವಾಗಿರುವುದನ್ನು ಸೂಚಿಸುತ್ತದೆ, ದೇಶದಾದ್ಯಂತ ಶಿಕ್ಷಕ ಶಿಕ್ಷಣದ ಹೆಸರಿನಲ್ಲಿ ನೀಡುವ ಶಿಕ್ಷಣದ ಗುಣಮಟ್ಟವನ್ನು ನಿಯಂತ್ರಿಸಲು ಮತ್ತು ಮೇಲ್ವಿಚಾರಣೆ ಮಾಡಲು ವಿಫಲವಾಗಿದೆ.

ಆದ್ದರಿಂದ, ಶಿಕ್ಷಕ ಶಿಕ್ಷಣದ ರಾಷ್ಟ್ರೀಯ ಮಂಡಳಿ (ಎನ್‌ಸಿಟಿಇ) ಶಿಕ್ಷಕ ಶಿಕ್ಷಣ ಸಂಸ್ಥೆಗಳಿಗೆ (ಟಿಇಐ) ವಹಿಸುತ್ತಿರುವ ಮೇಲ್ವಿಚಾರಣೆಯ ಪಾತ್ರವನ್ನು ಮತ್ತೊಮ್ಮೆ ನೋಡಬೇಕು ಮತ್ತು ಬದಲಿಗೆ ಶಿಕ್ಷಕ ಶಿಕ್ಷಣವನ್ನು ಕುರಿತು ಹೊಸ ಆಲೋಚನೆಗೆ ಹೊಂದಿಕೊಳ್ಳಬೇಕು, ಇದರಲ್ಲಿ ಎಲ್ಲಾ ಶಿಕ್ಷಕ ಶಿಕ್ಷಣ ಸಂಸ್ಥೆಗಳು (ಟಿಇಐ) ಬಹು–ವಿಷಯಗಳ ಕಲಿಕಾ ಪರಿಸರವಾಗಿ ಮಾರ್ಪಟ್ಟಿವೆ ಮತ್ತು ವಿಶ್ವವಿದ್ಯಾಲಯಗಳ ಅಡಿಯಲ್ಲಿ ಇವುಗಳನ್ನು ತರಬೇಕು ಎಂದು ಪ್ರಸ್ತಾಪಿಸಲಾಗಿದೆ. ಇದು ಸಂಭವಿಸಿದ ನಂತರ ಶಿಕ್ಷಣ ಸಂಸ್ಥೆಗಳನ್ನು (ಟಿಇಐ) ವಿಶ್ವವಿದ್ಯಾಲಯಗಳ ಕಾರ್ಯ ಚಟುವಟಿಕೆಯನ್ನು ನಿಯಂತ್ರಿಸುವ ವಿಶ್ವವಿದ್ಯಾಲಯ ಧನಸಹಾಯ ಆಯೋಗದ (ಯುಜಿಸಿ) ಮೂಲಕ ನಿಯಂತ್ರಿಸಬಹುದು ಮತ್ತು ಇದರ ಬೆಳಕಿನಲ್ಲಿ ಶಿಕ್ಷಕ ಶಿಕ್ಷಣದ ರಾಷ್ಟ್ರೀಯ ಮಂಡಳಿಯು (ಎನ್‌ಸಿಟಿಇ) ಯುಜಿಸಿಯ ಪ್ರಯತ್ನಗಳನ್ನು ನಕಲು ಮಾಡದಿರುವುದು ಮುಖ್ಯವಾಗಿದೆ; ಬದಲಾಗಿ ಇತರ ರಚನಾತ್ಮಕ ಕಾರ್ಯಗಳತ್ತ ಗಮನಹರಿಸಬೇಕು.

ಶಿಕ್ಷಕ ಶಿಕ್ಷಣದ ರಾಷ್ಟ್ರೀಯ ಮಂಡಳಿಗೆ (ಎನ್‌ಸಿಟಿಇ) ಸಂಬಂಧಿಸಿದ ಪ್ರಮುಖ ಸುಧಾರಣಾ ಕಾರ್ಯಸೂಚಿ ಹೀಗಿದೆ:

- ಶಿಕ್ಷಕ ಶಿಕ್ಷಣದ ರಾಷ್ಟ್ರೀಯ ಮಂಡಳಿ (ಎನ್‌ಸಿಟಿಇ) ಇದರ ಉತ್ಸಾಹಭರಿತ ಚಾಂಪಿಯನ್ ಆಗಿರಬೇಕು ಅಥವಾ ಅದನ್ನು ವಿಸರ್ಜಿಸಬೇಕು. ಈ ಸಂದರ್ಭದಲ್ಲಿ ಶಿಕ್ಷಕ ಶಿಕ್ಷಣದ ರಾಷ್ಟ್ರೀಯ ಮಂಡಳಿಯ (ಎನ್‌ಸಿಟಿಇ) ಮುಂದೆ ಇರುವ ಎರಡು ಆಯ್ಕೆಗಳೆಂದರೆ: (ಎ) ವಿಶಾಲವಾದ ಶೈಕ್ಷಣಿಕ ರೂಢಿಗಳನ್ನು ಅಭಿವೃದ್ಧಿಪಡಿಸುವ ಮೂಲಕ ಇದು ಒಬ್ಬ ಸುಗಮಕಾರನ ಮತ್ತು ಗುಣಮಟ್ಟವನ್ನು ಸಕ್ರಿಯಗೊಳಿಸುವವನ ಪಾತ್ರವನ್ನು ವಹಿಸುತ್ತದೆ. ಉದಾ.: ಬೋಧಕವರ್ಗದ ವೈವಿಧ್ಯಕ್ಕಾಗಿ ಮಾರ್ಗಸೂಚಿಗಳು (ನಿಯಮಗಳಲ್ಲ), ವಿಶ್ವವಿದ್ಯಾಲಯಗಳನ್ನು ಬೆಂಬಲಿಸಲು ಶಿಕ್ಷಕರ ಶಿಕ್ಷಣಕ್ಕಾಗಿ ಪಠ್ಯಕ್ರಮದ ಚೌಕಟ್ಟುಗಳು ಮತ್ತು / ಅಥವಾ ಇದು ರಾಷ್ಟ್ರೀಯ ಮೌಲೀಕರಣ ಮತ್ತು ಮಾನ್ಯತಾ ಪರಿಷತ್ತು (NAAC) ಅಡಿಯಲ್ಲಿ ಶಿಕ್ಷಕ ಶಿಕ್ಷಣಕ್ಕೆ ಮಾನ್ಯತೆ ನೀಡುವ ಸಂಸ್ಥೆಯಾಗುತ್ತದೆ; (ಬಿ) ಮೇಲಿನವು ಸಾಧ್ಯವಾಗದಿದ್ದರೆ, ಅದು ತನ್ನ ಅಸ್ತಿತ್ವವನ್ನು ಕೊನೆಗೊಳಿಸಬೇಕು ಮತ್ತು ಶಿಕ್ಷಕ ಶಿಕ್ಷಣದ ಸಂಪೂರ್ಣ ಮಾಲೀಕತ್ವವನ್ನು ವಿಶ್ವವಿದ್ಯಾಲಯಗಳಿಗೆ ಮತ್ತು ಮೂಲ ನಿಯಂತ್ರಕ ಕಾರ್ಯ ವಿಧಾನಗಳನ್ನು ಯುಜಿಸಿಗೆ ವರ್ಗಾಯಿಸಬೇಕು.

**ಶಿಕ್ಷಕ ಶಿಕ್ಷಣಕ್ಕೆ ಹಣಕಾಸು ಒದಗಿಸುವುದು**

ಕೊಠಾರಿ ಆಯೋಗ ಮತ್ತು ಅಂದಿನಿಂದ ಇಂದಿನವರೆಗಿನ ಎಲ್ಲಾ ಇತರ ಶೈಕ್ಷಣಿಕ ಆಯೋಗಗಳು ಮತ್ತು ವ್ಯಕ್ತಿಗಳು ಸ್ಪಷ್ಟವಾಗಿ

[4] *NCTE at a Glance; Functions of the Council http://ncte-india.org/ncte_new/?page_id=782*

ಹೇಳಿರುವುದು ಏನೆಂದರೆ, ನಾವು ಹೇಳಿರುವ ಶೈಕ್ಷಣಿಕ ಉದ್ದೇಶಗಳನ್ನು ಪೂರೈಸಬೇಕಾದರೆ, ಸಾಧಿಸಬೇಕಾದ ಗುರಿಗಳಿಗೆ ಅನುಗುಣವಾಗಿ ರಾಜ್ಯವು ಶಿಕ್ಷಣದ ಮೇಲೆ ಹೂಡಿಕೆಗಳನ್ನು ಮಾಡಬೇಕಾಗಿದೆ. ಶಿಕ್ಷಕ ಶಿಕ್ಷಣದ (ಟಿಇ) ಮೇಲಿನ ಹಣದ ನಿಯೋಜನೆಯು ಸಾಕಷ್ಟು ಪರಿಣಾಮ ಬೀರಿದೆ. ಏಕೆಂದರೆ ಅದು ಒಟ್ಟಾರೆ ಶಿಕ್ಷಣದ ಆಯವ್ಯಯದ (ಬಜೆಟ್‌ನ) ಒಂದು ಸಣ್ಣ ಶೇಕಡವಾರನ್ನು ಪಡೆದುಕೊಂಡಿದೆ.

### 12ನೇ ಯೋಜನೆಯಲ್ಲಿ ಶಿಕ್ಷಕ ಶಿಕ್ಷಣ (ಟಿ.ಇ.)

12ನೇ ಯೋಜನೆಗಾಗಿ ಮಾರ್ಚ್, 2012ರಲ್ಲಿ, ಶಿಕ್ಷಕ ಶಿಕ್ಷಣದ ಯೋಜನೆಯ ಪರಿಷ್ಕರಣೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿತು. 11 ನೇ ಯೋಜನೆಯಲ್ಲಿ ವರ್ಷಕ್ಕೆ 350 ಕೋಟಿಗಳಿಂದ 1400 ಕೋಟಿಗಳಿಗೆ ಹೆಚ್ಚಿಸಿದ ಆಯವ್ಯಯದೊಂದಿಗೆ (ಬಜೆಟ್‌ನೊಂದಿಗೆ) ಶಿಕ್ಷಕ ಶಿಕ್ಷಣ ಯೋಜನೆಯಲ್ಲಿ ಭಾರಿ ಬದಲಾವಣೆಯನ್ನು ಈ ಯೋಜನೆಯು ಶಿಫಾರಸು ಮಾಡಿದೆ. ಈ ಯೋಜನೆಯು ಸಾಂಸ್ಥಿಕವಾದದ್ದು. ಅಂದರೆ ಎಸ್ಸಿಇಆರ್ಟಿಗಳು, ಡಿಐಇಟಿಗಳು, ಸಿಟಿಇಗಳು, ಐಎಎಸ್‌ಇಗಳು ಮತ್ತು ಬೈಟ್ಸ್ BITEs (ವಲಯ ಮಟ್ಟದ ಶಿಕ್ಷಕ ಶಿಕ್ಷಣ ಸಂಸ್ಥೆಗಳು) ಎಂಬ ಹೊಸ ಸಂಸ್ಥೆಯನ್ನೂ ಒಳಗೊಂಡಂತೆ ಎಲ್ಲ ಸಂಸ್ಥೆಗಳಿಗೆ ಪ್ರವೇಶ, ಗುಣಮಟ್ಟ ಮತ್ತು ವಿಸ್ತರಿತ ಪಾತ್ರಗಳ (ಉದಾ.: ಮಾಧ್ಯಮಿಕ ಶಿಕ್ಷಣ ಕ್ಷೇತ್ರಗಳಲ್ಲಿ ಡಿಐಇಟಿಗಳು ಸಹ ಕೆಲಸ ಮಾಡಲು ಪ್ರಾರಂಭಿಸುತ್ತವೆ), ಮೇಲೆ ಕೇಂದ್ರೀಕರಿಸುವ ಮೂಲಕ ಅನುದಾನ ನೀಡುವುದು, ಶಿಕ್ಷಕ ಶಿಕ್ಷಕರ ವೃಂದವನ್ನು ರಚಿಸುವುದು, ಶಿಕ್ಷಕರು / ಮತ್ತು ಶಿಕ್ಷಕ ತರಬೇತಿಯ ಶಿಕ್ಷಕರ ತಯಾರಿ ಮತ್ತು ಅವರ ವೃತ್ತಿಪರ ಅಭಿವೃದ್ಧಿ, ಈ ಸಂಸ್ಥೆಗಳಾದ್ಯಂತ ಸಂಪರ್ಕಗಳ ಸಹಕಾರಗಳು/ಸಂಯೋಜನೆಗಳ ಮೂಲಕ ತಂತ್ರಜ್ಞಾನವನ್ನು ಸಂಯೋಜಿಸುವುದು ಮುಂತಾದವುಗಳನ್ನು ಅದು ಒಳಗೊಂಡಿದೆ.

ಶಿಕ್ಷಕರ ಶಿಕ್ಷಣ (ಟಿಇ) ಕ್ಷೇತ್ರದಲ್ಲಿ ಪ್ರಸ್ತುತ ಇರುವ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಇದನ್ನು ಮತ್ತಷ್ಟು ಗಣನೀಯವಾಗಿ ಹೆಚ್ಚಿಸುವುದು ಮುಖ್ಯ. ಶಿಕ್ಷಕ ಶಿಕ್ಷಣದ (ಟಿಇ) ಮೇಲಿನ ಬೇಡಿಕೆ ಶಿಕ್ಷಣ ಹಕ್ಕು ಕಾಯ್ದೆಯ (ಆರ್‌ಟಿಇ) ಮಾನದಂಡಗಳನ್ನು ಪೂರೈಸಲು ಅಗತ್ಯವಾದ ಶಿಕ್ಷಕರನ್ನು ಉತ್ಪಾದಿಸುವುದಕ್ಕೆ ಮಾತ್ರವಲ್ಲ. ಪ್ರಾಥಮಿಕ ಮಟ್ಟದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ (ಪಿಟಿಆರ್)ಯಲ್ಲಿ ಮತ್ತು ಮಾಧ್ಯಮಿಕ ಶಾಲಾ ಮಟ್ಟದಲ್ಲಿ ಅಂತರವನ್ನು ತುಂಬಲು, ಜೊತೆಗೆ ಇದು ಶಿಕ್ಷಕರು ಮತ್ತು ಶಿಕ್ಷಕ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವ ಬಗ್ಗೆಯೂ ಆಗಿದೆ. ಇವುಗಳಿಗೆ ಅಸ್ತಿತ್ವದಲ್ಲಿರುವ ಶಿಕ್ಷಕ ಶಿಕ್ಷಣ ಸಂಸ್ಥೆ (ಟಿಇಐ)ಗಳಲ್ಲಿ ಸಾಮರ್ಥ್ಯದ ವಿಸ್ತರಣೆ (ಮೂಲ ಸೌಕರ್ಯ ಮತ್ತು ಮಾನವ ಸಂಪನ್ಮೂಲ ಎರಡೂ) ಅಗತ್ಯವಿರುತ್ತದೆ, ಆದರೆ ದೇಶದಾದ್ಯಂತ ಶಿಕ್ಷಣ ಶಾಲೆಗಳನ್ನು ಸ್ಥಾಪಿಸುವ ಅಗತ್ಯವಿರುತ್ತದೆ ಮತ್ತು ಶಿಕ್ಷಕ ಶಿಕ್ಷಣವನ್ನು (ಟಿಇ) ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಸೇರಿಸಿ ವಿಶ್ವವಿದ್ಯಾಲಯಗಳ ಅಡಿಯಲ್ಲಿ ತರುತ್ತದೆ. ಇದು ಉನ್ನತ ಶಿಕ್ಷಣದ (ಎಚ್‌ಇ) ವೆಚ್ಚದಲ್ಲಿ ಗಣನೀಯ ಹೆಚ್ಚಳಕ್ಕೆ ಕಾರಣವಾಗಬಹುದು.

### ಶಿಕ್ಷಕ ತರಬೇತಿ ಶಿಕ್ಷಣದ ಶಾಲೆಗಳನ್ನು ಸ್ಥಾಪಿಸುವುದರ ಪ್ರಾಮುಖ್ಯತೆ

ಶಿಕ್ಷಣ ಕ್ಷೇತ್ರಕ್ಕೆ ಲಭ್ಯವಿರುವ ವೃತ್ತಿಪರರನ್ನು ಸೃಷ್ಟಿಸಲು ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣ ಶಾಲೆಗಳನ್ನು ಸ್ಥಾಪಿಸುವುದು ಕೇಂದ್ರ ಸರ್ಕಾರವು ಯೋಜಿಸುವ ಮತ್ತು ಕಾರ್ಯಗತಗೊಳಿಸಬೇಕಾದ ಪ್ರಮುಖ ಪರಿಹಾರವಾಗಿದೆ. ಅವಶ್ಯಕತೆಯ ಪ್ರಮಾಣವನ್ನು ಗಮನಿಸಿ ಹೇಳುವುದಾದರೆ, ದೊಡ್ಡ ರಾಜ್ಯಗಳಿಗೆ ಒಂದಕ್ಕಿಂತ ಹೆಚ್ಚು ಹಾಗೂ ಪ್ರತಿ ರಾಜ್ಯಕ್ಕೆ ಕನಿಷ್ಠ ಒಂದು ಶಿಕ್ಷಣ ಶಾಲೆಯನ್ನು ಸ್ಥಾಪಿಸುವ ಅವಶ್ಯಕತೆಯಿದೆ. ಪದವಿ ಪಡೆಯುತ್ತಿರುವ ತಜ್ಞರ ಸಂಖ್ಯೆಯನ್ನು ಏನಿಲ್ಲವೆಂದರೂ 5,000–10,000 ವೃತ್ತಿಪರರಂತೆ ಹೆಚ್ಚಿಸುವ ಗುರಿಯಾಗಿರಬೇಕು. ಇದು ದೀರ್ಘಾವಧಿ ಯೋಜನೆಯಾಗಿದ್ದು, ನಿಶ್ಚಿತವಾದ ಗಂಭೀರ ಆರ್ಥಿಕ ಬದ್ಧತೆಯ ಅಗತ್ಯವಿರುತ್ತದೆ.

ಆದಾಗ್ಯೂ, ನಮ್ಮ ವ್ಯವಸ್ಥಿತ ಸುಧಾರಣೆಗಳ ಬಗ್ಗೆ ನಾವು ಗಂಭೀರವಾಗಿದ್ದರೆ, ಈ ವಿಷಯದಲ್ಲಿ ಯಾವುದೇ ಅನಿಶ್ಚಿತತೆ ಇರುವುದಿಲ್ಲ. ಪ್ರಮುಖ ಸುಧಾರಣೆಯ ಕಲ್ಪನೆ ಹೀಗಿದೆ:

- ಆಯವ್ಯಯ (ಬಜೆಟ್) ವರ್ಧನೆಗೆ ಅನುಸಾರವಾಗಿ ಈ ಹೆಚ್ಚುವರಿ ಹಣವನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳುವುದು ಮತ್ತು ಸೋರಿಕೆಯನ್ನು ಮೂಲದಲ್ಲಿಯೇ ತಡೆಯುವುದು ಸಹ ನಿರ್ಣಾಯಕವಾಗಿದೆ.

### ಶಿಕ್ಷಕ ಶಿಕ್ಷಣ (ಟಿಇ) ವ್ಯವಸ್ಥೆಯನ್ನು ಆರಂಭದಿಂದ ಮರು ನಿರ್ಮಿಸುವ ಅವಶ್ಯಕತೆಯಿದೆ

ನಾವು ಇರುವ ಭೀಕರ ಪರಿಸ್ಥಿತಿಯನ್ನು ನಿಭಾಯಿಸಲು, ಪ್ರಸ್ತುತ ಜಾರಿಯಲ್ಲಿರುವ ಶಿಕ್ಷಕರ ಅಭಿವೃದ್ಧಿ ಮತ್ತು ನಿರ್ವಹಣೆಯ ಎಲ್ಲಾ

ಕೊಠಾರಿ ಆಯೋಗವು ನಮ್ಮ ರಾಷ್ಟ್ರೀಯ ಆದಾಯ (ಜಿಡಿಪಿಯ) 6% ಅನ್ನು ಶಿಕ್ಷಣಕ್ಕೆ ನಿಯೋಜಿಸಲು ಶಿಫಾರಸು ಮಾಡಿದೆ, ಆದರೆ ಕೊಠಾರಿ ಆಯೋಗದ ಚಿರಸ್ಮರಣೀಯ ವರದಿಯ 40ನೇ ವರ್ಷಾಚರಣೆಯನ್ನು ನಾವು ಆಚರಿಸುತ್ತಿರುವಂತೆಯೇ, ನಾವು ಕೇವಲ 4% ಅನ್ನು ದಾಟಿದ್ದೇವೆ. ನಾವು 1952ರಲ್ಲಿ ಶಿಕ್ಷಣಕ್ಕಾಗಿ ರಾಷ್ಟ್ರೀಯ ಆದಾಯದ (ಜಿಡಿಪಿ) ವೆಚ್ಚದ 1% ನಿಂದ (ಎಂಎಚ್‌ಆರ್‌ಡಿ ದತ್ತಾಂಶದಂತೆ) ಇತ್ತೀಚಿನ ದಿನಗಳಲ್ಲಿ ಜಿಡಿಪಿಯ 4% (ಎಬಿಇ; ಎಂಹೆಚ್‌ಆರ್‌ಡಿ 2015)ಗೆ ಸ್ವಲ್ಪ ಪ್ರಗತಿಯನ್ನು ಸಾಧಿಸಿದ್ದೇವೆ ಎನ್ನುವುದೂ ಸರಿ. ಆದಾಗ್ಯೂ, ಇದು ಪ್ರತಿವರ್ಷ ಏರಿಳಿತಗೊಳ್ಳುತ್ತಲೇ ಇದೆ ಮತ್ತು ಇದುವರೆಗಿನ ಅದರ ಅತ್ಯುತ್ತಮ ಹಂಚಿಕೆಯಲ್ಲೂ ಸಹ ಅಸಮರ್ಪಕವಾಗಿದೆ.

**ಇತ್ತೀಚಿನ ವರ್ಷಗಳಲ್ಲಿ ಶಿಕ್ಷಕ ಶಿಕ್ಷಣದ (ಟಿಇ) ಮೇಲೆ ವಿನಿಯೋಗಿಸಲಾದ ಹಣ (ಎಂಎಚ್‌ಆರ್‌ಡಿ 2012)**

**(i) XI ಪಂಚವಾರ್ಷಿಕ ಯೋಜನೆಯ ಅಡಿಯಲ್ಲಿ (2010–11) ಕಳೆದ ಕೆಲವು ವರ್ಷಗಳಿಂದ ಶಿಕ್ಷಕ ಶಿಕ್ಷಣಕ್ಕೆ ವಿನಿಯೋಗಿಸಲಾದ (ಟಿಇ) ವಾರ್ಷಿಕ ಬಜೆಟ್ 500 ಕೋಟಿ ರೂ. ಇದೆ. (2012ರ ಜನವರಿ 8ರವರೆಗೆ 500 ಕೋಟಿ ರೂ.ದಲ್ಲಿ 146.07 ಕೋಟಿ ರೂ. ಬಿಡುಗಡೆ ಮಾಡಲಾಗಿದೆ; ಮತ್ತು 2013–14ನೇ ಸಾಲಿಗೆ 500 ಕೋಟಿ ರೂ.ಗಳ ವಿನಿಯೋಗವನ್ನು ಪ್ರಸ್ತಾಪಿಸಲಾಗಿದೆ)**

**(ii) ಹಿಂದಿನ ಯೋಜನೆಯಲ್ಲಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಗಳು (ಎಸ್‌ಸಿಇಆರ್‌ಟಿ) ವೆಚ್ಚದ ಎಲ್ಲಾ ಅಂಶಗಳನ್ನು ಒಳಗೊಂಡ ಸಂಪೂರ್ಣ ಯೋಜನಾ ಅವಧಿಗೆ 2 ಕೋಟಿ ರೂಪಾಯಿಗಳನ್ನು ಪಡೆದಿದೆ, ಇದು ಪ್ರಸ್ತಾವಿತ ಯೋಜನೆಯಲ್ಲಿ ಪ್ರಸ್ತುತ ಮೂಲಸೌಕರ್ಯ ಸುಧಾರಣೆಗೆ ಮಾತ್ರ ಒದಗಿಸಲಾದ ಮೊತ್ತವಾಗಿದೆ.**

**(iii) ಅದೇ ರೀತಿ, ಇತರ ಸಂಸ್ಥೆಗಳಿಗೂ ಸಹ ಹಂಚಿಕೆಗಳನ್ನು ಚೆನ್ನಾಗಿ ಯೋಚಿಸಲಾಗಿದೆ.**

ಅಂಶಗಳನ್ನು ತುರ್ತಾಗಿ ಮತ್ತು ತೀವ್ರವಾಗಿ ಸುಧಾರಿಸುವ ಅವಶ್ಯಕತೆಯಿದೆ. ಈ ಸುಧಾರಣಾ ಯೋಜನೆಗೆ ನ್ಯಾಯಮೂರ್ತಿ ವರ್ಮಾ ಆಯೋಗದ (ಜೆವಿಸಿ) ಶಿಫಾರಸುಗಳು ಮತ್ತು ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, 2009 ಮಾರ್ಗಸೂಚಿಗಳನ್ನು ಅವುಗಳ ಸಂಪೂರ್ಣ ರೂಪದಲ್ಲಿ ಆರಂಭದಿಂದಲೇ ಅನುಷ್ಠಾನಗೊಳಿಸುವುದು ನಿರ್ಣಾಯಕವಾಗಿವೆ. ಈ ಮಾರ್ಗಸೂಚಿಗಳು ಬಹುಕಾಲದ ಸೇವಾ ಪೂರ್ವ ಶಿಕ್ಷಕ ಶಿಕ್ಷಣ ಕಾರ್ಯಕ್ರಮ, ನಿಜವಾದ ವೃತ್ತಿಪರರನ್ನು ಅಭಿವೃದ್ಧಿಪಡಿಸಲು ಪಠ್ಯಕ್ರಮದ ಮರುಸಂಘಟನೆ, ಶೈಕ್ಷಣಿಕ ವಿಭಾಗಗಳ ಇತರ ವಿಭಾಗಗಳು/ಇಲಾಖೆಗಳೊಂದಿಗೆ ಸಂಯೋಜಿಸುವುದು ಮತ್ತು ಮಾಹಿತಿ ಸಂವಹನ ಹಾಗೂ ತಂತ್ರಜ್ಞಾನದ (ಐಸಿಟಿ) ಹೆಚ್ಚಿನ ಬಳಕೆಗಾಗಿ ನ್ಯಾಯಯುತವಾಗಿ ಪ್ರತಿಪಾದಿಸುತ್ತವೆ. ಇದನ್ನು ಮತ್ತಷ್ಟು ಬಲಪಡಿಸಲು, ಶಿಕ್ಷಕ ಶಿಕ್ಷಣ ಸಂಸ್ಥೆಗಳನ್ನು ಒಂದಕ್ಕೊಂದು ಜೋಡಿಸುವುದು, ನಿಯಮಿತವಾಗಿ ಅವುಗಳ ಶ್ರೇಣೀಕರಣ ಮತ್ತು ಈ ಸಂಸ್ಥೆಗಳಿಗೆ ಬಲವಾದ ನಿಯಂತ್ರಕ ಕಾರ್ಯವಿಧಾನದ ವ್ಯವಸ್ಥೆಯನ್ನು ಸಹ ಸೂಚಿಸಲಾಗುತ್ತದೆ.

ಅಂತಿಮವಾಗಿ, ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ) ಶಿಕ್ಷಕ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್‌ಸಿಎಫ್‌ಟಿಇ) 2009 ಮತ್ತು 12ನೇ ಪಂಚವಾರ್ಷಿಕ ಯೋಜನೆಯ ಮಾರ್ಗಸೂಚಿಗಳೊಂದಿಗೆ ಹೊಂದಾಣಿಕೆಗಾಗಿ ಶಿಕ್ಷಕ ಶಿಕ್ಷಣಕ್ಕಾಗಿ ರಾಷ್ಟ್ರೀಯ ಕಾಣ್ಕೆಯನ್ನು ರಚಿಸುವ ತುರ್ತು ಅವಶ್ಯಕತೆಯಿದೆ. ನಿರ್ಣಾಯಕ ಅಂಶವೆಂದರೆ ಏನೇ ಮಾಡಿದರೂ ಅದು ಶಿಕ್ಷಣ ವ್ಯವಸ್ಥೆಯ ಎಲ್ಲಾ ವಿಭಾಗಗಳಿಗೂ ಹೊಂದುವಂತಹ ಸಮಗ್ರ ಯೋಜನೆಯಾಗಿರಬೇಕು. ಅಂತಹ ಸಂಯೋಜಿತ ವಿಧಾನವು ನೀತಿಗಳು ಮತ್ತು ಅವುಗಳ ಅನುಷ್ಠಾನದ ನಡುವಿನ ಅಂತರದಂತಹ ಹಿಂದಿನ ಸಮಸ್ಯೆಗಳನ್ನು ಪರಿಹರಿಸಬೇಕು. ಕೊಟ್ಟ ಕೊನೆಯದಾಗಿ, ಶಿಕ್ಷಕ ಶಿಕ್ಷಣ ಮತ್ತು ಶಿಕ್ಷಕರ ನಿರ್ವಹಣೆಯನ್ನು ವೃತ್ತಿಪರಗೊಳಿಸಲು ವ್ಯವಸ್ಥೆಯಲ್ಲಿ ನೈತಿಕ ಬದ್ಧತೆ, ಸಕ್ರಿಯಗೊಳಿಸುವಿಕೆ ಮತ್ತು ವಿಕೇಂದ್ರೀಕರಣದ ಅಡಿಪಾಯದ ಮೇಲೆ ನಿಂತಿರುವ, ಹಾಗೂ ಕಠಿಣತೆ, ನಿಯಂತ್ರಣ, ಮತ್ತು ಉತ್ತಮ ಶಿಕ್ಷಣದ ಮಾತುಗಳನ್ನಷ್ಟೇ ಆಡುವ ಹಳೆಯ ಸಂಸ್ಕೃತಿಯಿಂದ ಹೊರಬರುವ ಆಳವಾದ ಸಾಂಸ್ಕೃತಿಕ ಬದಲಾವಣೆಗಳ ಅವಶ್ಯಕತೆಯಿದೆ. ■


***References:***

**Government Notifications / Reports / Websites**

Planning & Monitoring Unit; MHRD. Analysis of budgeted expenditure on education 2011-12 to 2013-14, MHRD, New Delhi, 2015

Joint Review Missions (JRM), MHRD, 2015

www.teindia.nic.in/**jrm**.aspx)/**mhrd**.gov.in/sites/upload_files/mhrd/files/upload_document/**JRM**

National Council for Teacher Education (NCTE) ACT, 2014

www.ncte-india.org

ncte-india.org/ncte_new/?page_id=910

NCTE at a glance; Objectives / Functions of the Council

http://ncte-india.org/ncte_new/?page_id=782

http://ncte-india.org/ncte_new/?page_id=782

Justice Verma Commission (JVC) recommendations, MHRD, 2012

mhrd.gov.in/sites/upload_files/mhrd/files/document-**reports**/JVC%20 Vol%201.pdf

**Articles / Research Reports**

Comments and Suggestions to inputs on the draft New Education Policy, Azim Premji Foundation, August 2016

Ramachandran, et al. *Teachers in the Indian Education System: How we manage the teacher work force in India*, NUEPA, December 2015

Minni, Puja; Jha, Jyotsna. *National Study on Working Conditions of Teachers: Karnataka State Report*, Centre for Budget and Policy Studies (CBPS), Bangalore, February 2015

Knowledge resource Centre. *Changes in the educational Budget of Central Government*, Azim Premji Foundation, June 2015

Behar, Anurag. *Education agenda for the new Government*, The Mint, March 2014

Behar, Anurag. India needs a new teacher education system, The Mint, July 2014

Azim Premji Foundation. *Teacher and Teacher Education in India – A Position Paper*, 2014

Rishikesh, *Teacher Salaries in India*, Azim Premji Foundation, August 2010

Rishikesh, *District Institutes of Education and Training – A Status Report*, Azim Premji Foundation, June 2010

Surya, Vasantha. *An interview with Prof Krishna Kumar titled 'Teaching profession is in a crisis'*. Frontline, volume 25 - issue 05, March 2008

Kumar, Krishna. *The Child's Language And The Teacher - A Handbook*, United Nations Children's Fund, 1986


ಅನುವಾದಕರು: **ಆನಂದ್** | ಪರಿಶೀಲಕರು: **ಪ್ರಜ್ಞಾ**


**ರಿಷಿಕೇಶ್** ಇವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಪಾಲಿಸಿ & ಗವರ್ನೆನ್ಸ್‌ನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದಾರೆ; ಅವರು (ಹಬ್ ಫಾರ್ ಎಜುಕೇಶನ್) ಶಿಕ್ಷಣ, ಕಾನೂನು ಮತ್ತು ನೀತಿಯ ಕೇಂದ್ರವನ್ನು ವಿಶ್ವವಿದ್ಯಾಲಯದಲ್ಲಿ ಮುನ್ನಡೆಸುತ್ತಾರೆ. ಅವರ ಸಂಶೋಧನಾ ಆಸಕ್ತಿಗಳು ಶೈಕ್ಷಣಿಕ ಮೌಲ್ಯಮಾಪನಗಳು ಮತ್ತು ಅಧ್ಯಾಪಕರ ಶಿಕ್ಷಣದ ಕ್ಷೇತ್ರಗಳಲ್ಲಿವೆ ಮತ್ತು ಶೈಕ್ಷಣಿಕ ನೀತಿಗೆ ಸಂಬಂಧಿಸಿದ ಪ್ರಸ್ತುತ ವಿಷಯಗಳೊಂದಿಗೆ ಆಳವಾಗಿ ತೊಡಗಿಸಿಕೊಂಡಿದ್ದಾರೆ. ಇವರನ್ನು rishikesh@apu.edu.in ನಲ್ಲಿ ಸಂಪರ್ಕಿಸಬಹುದು.